ಶ್ರೀ ಹೆಚ್.ಕೆ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಏನೂ ಇಲ್ಲ, ಬಹಳ ಶಾಂತವಾತಾವರಣ ಇದೆ.

ಶ್ರೀ ಜಗದೀಶ್ ಶೆಟ್ಟರ್ : ನೋಡಿ response ಬರಲಿ. ಕೆಳಗಿನ ವ್ಯವಸ್ಥೆಯಲ್ಲಿ ಏನೇನು ಲೋಪದೋಷಗಳು ಇವೆ ಅವು ಬರಲಿ. ಈಗ ಸಂಜೆ 7 ಗಂಟೆ ಆಗಿದೆ, ಈಗ ಕೊನೆಯ ಸಮಯದಲ್ಲಿ ಬಿಲ್ ತಂದರೆ ಹೇಗೆ?

ಅಧ್ಯಕ್ಷರು : ಆಯಿತು, ಏನೂ ತಕರಾರು ಇಲ್ಲ.

ಶ್ರೀ ಎನ್.ಚಲುವರಾಯಸ್ವಾಮಿ : ಇನ್ನೂ detail ಆಗಿ ಹೋಗಿ ತೆಗೆದುಕೊಂಡು ಬಂದಿದ್ದರೆ ಒಳ್ಳೆಯದು. ನಿಮ್ಮ ಕೈಯಿಮದ ತರುವುದಕ್ಕೆ ಸಾಧ್ಯ. ನಿಮ್ಮ ಕಾಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ತರಬೇಕು.

ಶ್ರೀ ಹೆಚ್.ಕೆ.ಪಾಟೀಲ್ : ಅದನ್ನು ಮಾಡೋಣ. ಅದರ ಜೊತೆಯಲ್ಲಿ ಇದನ್ನು ಮಾಡೋಣ. ಆ ಬಿಲ್ ತರುವುದಕ್ಕೆ ಮುಂಚೆ ನಿಮ್ಮ ಜೊತೆಯಲ್ಲಿ ಚರ್ಚೆ ಮಾಡಿ ಸಮಗ್ರವಾದ ವಿಧೇಯಕವನ್ನು ತರುತ್ತೇನೆ.

9. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮುಂದು ವರದ ಚರ್ಚೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : (ಮಾಗಡಿ) ಮಾನ್ಯ ಅಧ್ಯಕ್ಷರೆ. ಈ ಒಂದು ಚರ್ಚೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. 2013ನೇ ಸಾಲಿನ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕರ್ನಾಟಕದ ಜನತೆ ಹೊಸ ಆಶೋತ್ತರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದ ರಚನೆಗೆ ಅವಕಾಶ ಮಾಡಿಕೊಟ್ಟಿದ್ದಾರೆನ್ನತಕ್ಕಂಥ ಮಾತನ್ನು ಸರ್ಕಾರ ಹೇಳಿದೆ. ಜನ ಬದಲಾವಣೆ ಬಯಸಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಬದಲಾವಣೆ ಬಯಸುವುದರ ಜೊತೆಗೆ ಹಿಂದಿನ ಸರ್ಕಾರಗಳು ಮಾಡಿದ ತಪ್ಪಿನಿಂದ ನಮಗೆ ಅವಕಾಶ ಮಾಡಿಕೊಟ್ಟಿದ್ದರು. ನಮ್ಮದು ಮತ್ತು ಬಿಜೆಪಿ ಯವರ ಸಮ್ಮಿಶ್ರ ಸರ್ಕಾರ ಇತ್ತು. ಅವತ್ತು ಅಧಿಕಾರ ಕೊಡಲಿಲ್ಲ ಎನ್ನುವ ಒಂದೇ ಕಾರಣಕ್ಕೆ ಬಿಜೆಪಿ ಗೆ ಜನ ಜನಾದೇಶವನ್ನು ಕೊಟ್ಟರು. ಈಗ ಮಾನ್ಯ ಯಡಿಯೂರಪ್ಪನವರ ಕಿತ್ತಾಟದಿಂದ ಕಾಂಗ್ರೆಸ್‌ಗೆ ಅಧಿಕಾರ ಬಂತು. ಜನ ಸ್ಪಷ್ಟವಾಗಿ ಆದೇಶ ಮಾಡಿ ಸರ್ಕಾರ ರಚನೆ ಮಾಡಲಿಕ್ಕೆ ಬಹಳ ಉತ್ಸಾಹದಿಂದ ಏನು ಕೊಟ್ಟಿಲ್ಲ. ಯಾರೋ ಮಾಡಿದ ತಪ್ಪಿಗೆ ಯಾರಿಗೋ ಅವಕಾಶವನ್ನು

ಕೊಟ್ಟಂಥ ಒಂದು ಪರಿಸ್ಥಿತಿಯನ್ನು ಇವತ್ತು ನಾವು ನೋಡುತ್ತಿದ್ದೇವೆ. ಬಹುಶಃ ಬಿಜೆಪಿಯವರಲ್ಲಿ ಆ ಒಂದು ಘಟನಾವಳಿಗಳು ನಡೆಯಲಿಲ್ಲವೆಂದರೆ, ಈ ಸರ್ಕಾರ ಬರಲಿಕ್ಕೆ ಅವಕಾಶ ಆಗುತ್ತಿರಲಿಲ್ಲ. ಒಂದು ನಿಮಿಷ, ನಮ್ಮ ತಪ್ಪಿನಿಂದ ಬಿಜೆಪಿ ಅಧಿಕಾರಕ್ಕೆ ಬಂತು ಎಂದು ನಾನು ಆಗಲೇ ಹೇಳಿದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಕಳೆದ ಸಲ ನೀವು ಅಲ್ಲಿಯೇ ಇದ್ದಿರಲ್ಲಾ?

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ನನಗೆ ಕೊಟ್ಟಿರುವುದು 10 ನಿಮಿಷ, ದಯಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು : ಆಯಿತು, ಹೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ನನ್ನ ಜಿಲ್ಲೆಯ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡುತ್ತೇನೆ. ಭ್ರಷ್ಟಾಚಾರದ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು. ಭ್ರಷ್ಟಾಚಾರದ ಬಗ್ಗೆ ಮಾತನಾಡತಕ್ಕಂಥ ನೈತಿಕತೆಯನ್ನು ಎಲ್ಲಾ ಪಕ್ಷಗಳು ಕಳೆದುಕೊಂಡಿವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಭ್ರಷ್ಟಾಚಾರ ಹುಟ್ಟಿದ್ದೆ ಕಾಂಗ್ರೆಸ್‌ನಿಂದ. ಅದರ ಪಿತಾಮಹನೆ ಕಾಂಗ್ರೆಸ್. ಇಲ್ಲಿ ಒಂದು ಮಾತನ್ನು ಹೇಳಿದ್ದೀರಿ. ಭ್ರಷ್ಟಾಚಾರದಿಂದ ಈ ದೇಶದಲ್ಲಿ ನಮ್ಮ ರಾಜ್ಯ ತಲೆತಗ್ಗಿಸುವಂಥ ವಾತಾವರಣವನ್ನು ಇವತ್ತು ನೋಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ನಿಮ್ಮ ಭಾಷಣದಲ್ಲಿ ಹೇಳಿದ್ದೀರಿ. ಆದರೆ ಮಾನ್ಯ ಅಧ್ಯಕ್ಷರೆ, ಕೇಂದ್ರದ ಸಮಸ್ಯೆ, ಕೇಂದ್ರದ ವಿಚಾರ, ಇವತ್ತು ಪ್ರಪಂಚದಲ್ಲಿಯೇ ..

ಅಧ್ಯಕ್ಷರು : ಬೇಡ, ಬೇಡ ಅದಕ್ಕೆ ಉತ್ತರ ಹೇಳುವವರು ಇಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅದನ್ನು ಬೇಡ ಅನ್ನುತ್ತೀರಾ?

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಅದಕ್ಕಾಗಿ ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡುವುದೇ ಬೇಡ ಎಂದು ಹೇಳುತ್ತಿರುವುದು. ಏಕೆ ಹೇಳಿದಿರಿ ಅಲ್ಲಿ ಈ ಮಾತನ್ನು? ಏಕೆ ಅದನ್ನು ನಿಮ್ಮ ಭಾಷಣದಲ್ಲಿ ಸೇರಿಸಿದಿರಿ? ಭ್ರಷ್ಟಾಚಾರದ ಬಗ್ಗೆ

ಮಾತನಾಡುವಂಥ ನೈತಿಕತೆಯನ್ನು ಎಲ್ಲಾ ಸರ್ಕಾರಗಳು ಇವತ್ತು ಕಳೆದುಕೊಂಡಿವೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಸ್ವಾತಂತ್ರ್ಯ ಬಂದಾಗಿನಿಂದಲೂ ಭ್ರಷ್ಟಾಚಾರ ಎಲ್ಲಾ ರಾಜಕೀಯ ಪಕ್ಷಗಳಲ್ಲಿಯೂ ಇದೆ. ಆದರೆ ಬಹಳಷ್ಟು ಭ್ರಷ್ಟಾಚಾರ ಬಂದಿದ್ದು, ಬಿಜೆಪಿ ಮತ್ತು ಈ ಜೆ.ಡಿ.(ಎಸ್.)ಸಮ್ಮಿಶ್ರ ಸರ್ಕಾರ ಬಂದಾಗ ಮಹಾ ಭ್ರಷ್ಟಾಚಾರ ಬಂದಿದ್ದು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇವರು ಬ್ಲಾಕ್‌ಮೇಲ್ ರಾಜಕಾರಣ ಮಾಡುತ್ತಿದ್ದಾರೆ. ಸಮ್ಮಿಶ್ರ ಸರ್ಕಾರದಲ್ಲಿ ಭ್ರಷ್ಟಾಚಾರ ಪ್ರಾರಂಭವಾಗಿದ್ದು.

(ಗೊಂದಲ)

ಅಧ್ಯಕ್ಷರು : ಇಲ್ಲಾ, ವಿಷಯ ಅಲ್ಲಿಗೆ ಮುಕ್ತಾಯವಾಗಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ರವಿಯವರೆ, ಸುಮ್ಮನಿರಿ. ನೀವು ಯೀಲ್ಡ್ ಆಗಬೇಡಿ, ನೀವು ಹೇಳಿ.

ಶ್ರೀ ಸಿ.ಟಿ.ರವಿ : ಅವರು ಅಲ್ಲಿ ಸುಮ್ಮನೆ ರಾಜೀನಾಮೆಯನ್ನು ಕೊಟ್ಟರಾ?

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಮಂತ್ರಿಗಳೇ, ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

(ಗೊಂದಲ)

ಅಧ್ಯಕ್ಷರು : ಸ್ವಲ್ಪ ತಾಳ್ರಿ, ಪಾಟೀಲ್‌ರು ಮಾತನಾಡುತ್ತಾರೆ ಇರಿ.

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ ವಿಚಾರಣೆಯಲ್ಲಿರತಕ್ಕಂಥ ಸಚಿವರು ಕೂಡಲೇ ರಾಜೀನಾಮೆ ಕೊಟ್ಟರು. ಸುಮ್ಮನೆ ಏನೂ ಕುಳಿತುಕೊಳ್ಳಲಿಲ್ಲ. ರಾಜೀನಾಮೆ ಕೊಡಿ ಎಂದು ಕೇಳಿದರು. ನೀವು ಏನು ಮಾಡಿದಿರಿ? ಸರ್ಕಾರದಲ್ಲಿರತಕ್ಕಂಥ ಮುಖ್ಯಸ್ಥರು, ಮಂತ್ರಿಗಳು, ಅವರನ್ನು ಏಕೆ ಜೈಲಿಗೆ ಕಳುಹಿಸಲಿಲ್ಲ, ಅವರಿಂದ

ರಾಜೀನಾಮೆ ಏಕೆ ತೆಗೆದುಕೊಳ್ಳಲಿಲ್ಲ ಎನ್ನುವಂಥ ಅಡ್ವಾನಿಯವರನ್ನೂ ಸಹ ಧಿಕ್ಕರಿಸಿರತಕ್ಕಂಥವರು ನೀವು, ನೀವು ಈ ಒಂದು ಚರ್ಚೆಯೊಳಗೆ ಪಾಲ್ಗೊಳ್ಳುವುದಕ್ಕೆ ನೈತಿಕ ಹಕ್ಕು ಇದೆಯೆಂದು ಭಾವಿಸಿಕೊಂಡಿದ್ದೀರಾ? ನೀವು ಏನಾದರೂ ಭ್ರಷ್ಟಾಚಾರ ಬಗ್ಗೆ ಮಾತನಾಡಿದರೆ ಜನರು ನೋಡಿ ನಗುತ್ತಾರೆ.

(ಗೊಂದಲ)

ಅಧ್ಯಕ್ಷರು : ಶ್ರೀ ಜಗದೀಶ ಶೆಟ್ಟರೆ, ಕುಳಿತುಕೊಳ್ಳಿ, ಮಾತನಾಡಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: . . .ಕಲ್ಲಿದ್ದಲು ಹಗರಣ, . . .

(ಗೊಂದಲ)

ಅಧ್ಯಕ್ಷರು : ನಮಗೆ ಸಂಬಂಧಪಟ್ಟಿಲ್ಲ ದಿರುವುದನ್ನು ಇಲ್ಲಿ ಮಾತನಾಡುವುದು ಬೇಡ.;

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಅದಕ್ಕೋಸ್ಕರವೇ ಭ್ರಷ್ಟಾಚಾರದ ಬಗ್ಗೆ ಮಾತನಾಡತಕ್ಕಂಥ ನೈತಿಕತೆ ಎರಡೂ ರಾಷ್ಟ್ರೀಯ ಪಕ್ಷಗಳು ಕಳೆದುಕೊಂಡಿವೆ ಎಂದು ಹೇಳಿರುವುದು. ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡುವುದು ಒಳಿತು ಅಲ್ಲ ಎನ್ನುವುದು ನನ್ನ ಭಾವನೆ. ಇನ್ನು ಈ ಸರ್ಕಾರ ಯಾವ ರೀತಿ ಇದೆ ಎಂದು ಮಾನ್ಯ ದತ್ತಾ ರವರು ಬಹಳ ಚೆನ್ನಾಗಿ ಹೇಳಿದರು. ಆ ಕಡೆ ಇರುವ ಸರ್ಕಾರ ಇವತ್ತು ಕೂಡ ಒಂದು ರೀತಿಯಲ್ಲಿ ಸಮ್ಮಿಶ್ರ ಸರ್ಕಾರ.

ಶ್ರೀ ಪಿ.ಎಂ. ಅಶೋಕ್ : ಯಾರು ಹೇಳಿದ್ದು?

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಈಗ ಮುಖ್ಯಮಂತ್ರಿಯವರು ಯಾವ ಪಕ್ಷದಿಂದ ಬಂದವರು? ಅಂದರೆ ಜನತಾ ಪರಿವಾರದಿಂದ ಬಂದವರು. ಇನ್ನು ಶ್ರೀನಿವಾಸ ಪ್ರಸಾದ್‌ರವರು ಜನತಾ ಪರಿವಾರದಿಂದ ಬಂದವರು.ಡಾ: ಹೆಚ್.ಸಿ. ಮಹದೇವಪ್ಪನವರು ಜನತಾ ಪರಿವಾರದಿಂದ ಬಂದವರು.

ಶ್ರೀ ಮಹದೇವ ಪ್ರಸಾದ್‌ರವರು ಜನತಾ ಪರಿವಾರದಿಂದ ಬಂದವರು. ಶ್ರೀ ಅಂಬರೀಶ್ ರವರು ಜನತಾ ಪರಿವಾರದಿಂದ ಬಂದವರು. ನಿಮಗೆ ಎಷ್ಟು ಜನರು ಬೇಕು?

(ಗೊಂದಲ)

ಅಧ್ಯಕ್ಷರು : ನೀವು ಚರ್ಚೆ ಮಾಡಬೇಕೇ ಅಥವಾ ಸುಮ್ಮನೆ ಗಲಾಟೆ ಎಬ್ಬಿಸುತ್ತೀರಾ? ನೀವು ಹೇಳುವುದನ್ನು ಸರಿಯಾಗಿ ಹೇಳಿ. (ಗೊಂದಲ) ಯಾವಾಗಲೂ ಸಹ ಶಾಸನ ಸಭೆಯಲ್ಲಿ ಅವಕಾಶ ಸಿಕ್ಕಾಗ ಇನ್ನೊಂದು controversy ಬರುವ ರೀತಿಯಲ್ಲಿ ಮಾತನಾಡುವುದು ಅಭ್ಯಾಸ ಮಾಡಿಕೊಳ್ಳಬಾರದು.

ಶ್ರೀ ಹೆಚ್.ಸಿ. ಬಾಲಕೃಷ್ಣ : ದಯಮಾಡಿ ಕ್ಷಮಿಸಿ ಅಧ್ಯಕ್ಷರೆ. ಏಕೆ ಈ ಮಾತು ಹೇಳುತ್ತೇವೆಂದರೆ, ನಮ್ಮ ಜಿಲ್ಲೆ ರಾಮನಗರ ಜಿಲ್ಲೆ.

ಶ್ರೀ ಸಿ.ಟಿ. ರವಿ : ಒಂದು ನಿಮಿಷ yield ಆಗಿ.

ಅಧ್ಯಕ್ಷರು : ಬಾಲಕೃಷ್ಣರವರೆ, yield ಆಗುವುದು ಬೇಡ, continue ಮಾಡಿ. ಈಗಾಗಲೇ 7–30, 8–00 ಗಂಟೆ ಸಮಯವಾಗಿದೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನಮ್ಮ ರಾಮನಗರ ಜಿಲ್ಲೆಯದ್ದು ದೊಡ್ಡ ದುರಂತ. ಕುಮಾರಸ್ವಾಮಿಯವರು ಇದ್ದಂಥ ಕಾಲದಲ್ಲಿ ರಾಮನಗರ ಜಿಲ್ಲೆ ಎಂದು ಮಾಡಿದರು. ಅದು ಆದ ತಕ್ಷಣವೇ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂತು. ನಮ್ಮನ್ನು ಕೇಳುವವರಿಲ್ಲ ಮಾನ್ಯ ಅಧ್ಯಕ್ಷರೆ, ದಯಮಾಡಿ ತಾವಾದರೂ ನಮ್ಮ ಕಷ್ಟ ಕೇಳಬೇಕು.

ಅಧ್ಯಕ್ಷರು : ಹೇಳಿ, ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನಮ್ಮ ಜಿಲ್ಲೆಗೆ ಕಳೆದ 5 ವರ್ಷಗಳಲ್ಲಿ 5 ಜನ ಉಸ್ತುವಾರಿ ಸಚಿವರು ಆಗಿದ್ದಾರೆ. ಈ ಜಿಲ್ಲೆ ಬಗ್ಗೆ ಆಸಕ್ತಿ ತೋರತಕ್ಕಂಥ ಯಾರನ್ನೂ ಉಸ್ತುವಾರಿ ಸಚಿವರನ್ನಾಗಿ ಮಾಡಿಲ್ಲ. ಅದು ಬಿಟ್ಟು ಏನೋ ಕಾಟಾಚಾರಕ್ಕೆ ಸ್ವಾತಂತ್ರ್ಯ ದಿನಾಚರಣೆಗೆ ಬಾವುಟ ಹಾರಿಸುವುದಕ್ಕೆ, ಆ ಕೆಲಸಗಳಿಗೋಸ್ಕರ ಉಸ್ತುವಾರಿ ಮಂತ್ರಿಗಳೆಂದು ಮಾಡಿದರು. ಅಲ್ಲಿ ಆ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿರುವ ಒಂದು ಕಚೇರಿಗೂ ಸಹ ಹಣ ಮಂಜೂರು ಮಾಡುವ ಕೆಲಸ ಮಾಡಲಿಲ್ಲ. ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಇದು ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರು Finance Minister ಆಗಿದ್ದಾಗ ಮಂಜೂರು ಆಗಿರುವಂಥದ್ದು. ಆದರೆ, ಅವರು ಮುಖ್ಯಮಂತ್ರಿ ಆದರೂ ಸಹ ಆ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಲಿಲ್ಲ. ಕಾರಣ, ಇದು ಕುಮಾರಸ್ವಾಮಿಯವರ ಜಿಲ್ಲೆ ಎಂದು. ಇವತ್ತು ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ

ನಮ್ಮ ಜಿಲ್ಲೆಗೆ ಕಾಂಗ್ರೆಸ್ ಸರ್ಕಾರದಲ್ಲಿ ಒಂದು ತಿಂಗಳಿಗೆ ಇಬ್ಬರು ಉಸ್ತುವಾರಿ ಸಚಿವರು. ಶ್ರೀ ಕೃಷ್ಣ ಬೈರೇಗೌಡರನ್ನು ನಮ್ಮ ಉಸ್ತುವಾರಿ ಸಚಿವರು ಎಂದು ಘೋಷಣೆ ಮಾಡಿದರು, ಅವರು ಏಕೋ ಬೇಡ ಎಂದು ಹೇಳಿದರು. ಈಗ ಜಾರ್ಜ್ ಸಾಹೇಬರನ್ನು ಉಸ್ತುವಾರಿ ಸಚಿವರೆಂದು announce ಮಾಡಿದ್ದಾರೆ, ನಾವು ಸ್ವಾಗತ ಬಯಸುತ್ತೇವೆ, ಅವರು ಉತ್ತಮವಾದ ಕೆಲಸ ಮಾಡಲಿ ಅವರಿಗೆ ಸಹಕಾರ ಕೊಡುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ ಪ್ರಭಾವಿ ಶಾಸಕರು ನಮ್ಮ ಜಿಲ್ಲೆಯವರು, ಒಬ್ಬರು ಶಾಸಕರಾದ ಮೇಲೆ ಎಷ್ಟು ದಿವಸದ ಒಳಗಡೆ ಪ್ರಮಾಣವಚನ ಸ್ವೀಕರಿಸಬೇಕು, ಈ ಸದನದಲ್ಲಿ ಪ್ರಮಾಣವಚನ ಸ್ವೀಕರಿಸಬೇಕು ಎನ್ನುವುದನ್ನು ತಾವು ಹೇಳಬೇಕು.ಕಾರಣ ಅಂತೂ ಗೊತ್ತಿಲ್ಲ.

ಅಧ್ಯಕ್ಷರು : ಅನವಶ್ಯಕವಾದ ವಿಚಾರ ಏಕೆ ಹೇಳುತ್ತೀರಿ? ಅವರಿಗೆ ಇಚ್ಛೆ ಇದ್ದಾಗ ಮಾಡುತ್ತಾರೆ. ಅದನ್ನು ಅವರಿಗೇ ಬಿಡಿ. ವಿಷಯಕ್ಕೆ ಬನ್ನಿ. ಇಲ್ಲದಿದ್ದರೆ ನಾನು adjourn ಮಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯವರೊಬ್ಬರು ಸಚಿವರಾಗಿದ್ದರೆ ನಮ್ಮ ಜಿಲ್ಲೆ ಅಭಿವೃದ್ಧಿಯಾಗುತ್ತಿತ್ತು. ನಮ್ಮ ಜಿಲ್ಲೆಯವರು ಸಚಿವರಾಗದಿರುವುದರಿಂದ ನಮಗೆ ತೊಂದರೆ ಆಗುತ್ತಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ನಮ್ಮ ಜಿಲ್ಲೆಯವರು ಒಬ್ಬರು ಮಂತ್ರಿಯಾಗಿದ್ದರೆ ನಮ್ಮ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಅವರಿಗೆ ಆಸಕ್ತಿ ಇರುತ್ತಿತ್ತು. ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಿದರು. ಕೆಲವು ವಿಚಾರಗಳನ್ನು ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು. ಆದರೆ, ಮುಖ್ಯಮಂತ್ರಿಯವರ ಮಾತು ಎಂದರೆ ಅದು ಆದೇಶ ಇದ್ದ ಹಾಗೆ. ಒಂದು ರೂಪಾಯಿಗೆ ಒಂದು ಕೆ.ಜಿ.ಅಕ್ಕಿ ಕೊಡುವ ವಿಚಾರ ಇರಬಹುದು, ಬೇರೆ ಬೇರೆ ವಿಚಾರಗಳು ಇರಬಹುದು. ಈ ರಾಜ ಕಾಲುವೆಗಳನ್ನೆಲ್ಲ ಒತ್ತುವರಿ ಮಾಡಿರತಕ್ಕದ್ದನ್ನೆಲ್ಲ ಕೂಡಲೇ ತೆರವುಗೊಳಿಸಬೇಕೆನ್ನುವ ಮಾತು ಹೇಳಿದರು. ಎಲ್ಲಿ ತೆರವುಗೊಳಿಸುತ್ತಿದ್ದಾರೆ? ತೆರವುಗೊಳಿಸುವ ವಿಚಾರ ಮಳೆ ಜಾಸ್ತಿ ಬಂದು ಅನಾಹುತವಾದಾಗ ಮಾತ್ರ ಜ್ಞಾಪಕಕ್ಕೆ ಬರುತ್ತದೆ. ತದನಂತರ ಅದನ್ನು ಮರೆತೇ ಬಿಡುತ್ತಾರೆ. ಏಕೆ ಹೇಳುತ್ತಿದ್ದೇನೆ ಎಂದರೆ, ಬೆಂಗಳೂರಿನಿಂದ ಬರುವ ಎಲ್ಲಾ

ಕಚಡ ನೀರು, ಕೊಳಚೆ ನೀರು ಬೈರಮಂಗಲ ಕೆರೆಗೆ ಬಂದು ಆ ಕೆರೆ ಸಂಪೂರ್ಣವಾಗಿ ಕಲುಷಿತವಾಗಿದೆ. ಅಲ್ಲಿ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ಜನರಿಗೆ ಕುಡಿಯಲಿಕ್ಕೆ ಶುದ್ಧವಾದ ನೀರಿಲ್ಲ. ಈ ಬಗ್ಗೆ ನಾನು ಹಿಂದಿನ ಸರ್ಕಾರದ ಗಮನವನ್ನೂ ಸಹ ಸೆಳೆದಿದ್ದೆ. ಬೇರೆ ಒಂದು ಯೋಜನೆ ಮೂಲಕ ಅಲ್ಲಿಗೆ ಕಾವೇರಿ ನೀರನ್ನು ಕುಡಿಯುವ ಸಲುವಾ ಒದಗಿಸಿಕೊಡುತ್ತೇವೆನ್ನುವ ಆಶ್ವಾಸನೆ ಹಿಂದಿನ ಸರ್ಕಾರದವರು ಕೊಟ್ಟಿದ್ದರು. ಅಲ್ಲಿ ಒಂದು ಶುದ್ಧೀಕರಣ ಘಟಕವನ್ನು ಪ್ರಾರಂಭ ಮಾಡಬೇಕು. ಬೆಂಗಳೂರಿನಿಂದ ಬರುತ್ತಿರುವ ಕೊಳಚೆ ನೀರನ್ನು ಶುದ್ಧೀಕರಣ ಮಾಡಿ ಆ ಕೆರೆಗೆ ಬಿಡಬೇಕೆನ್ನುವ ಒತ್ತಾಯ ಮಾಡಿದ್ದೆ. ದಯಮಾಡಿ ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಅಲ್ಲಿ ಶುದ್ಧೀಕರಣ ಘಟಕ ಆಗದೇ ಇದ್ದರೆ ನಾವು ಬಹಳಷ್ಟು ರೋಗರುಜಿನಗಳಿಂದ ಸಾಯತಕ್ಕಂಥ ವಾತಾವರಣ ನಿರ್ಮಾಣವಾಗುತ್ತದೆ. ಬೆಂಗಳೂರು ಎಷ್ಟು ಪ್ರಾಮುಖ್ಯವೋ ಇಲ್ಲಿಂದ ಹೋಗತಕ್ಕಂಥ ಕಲುಷಿತ ನೀರನ್ನು ಕಡೆಗೆ ಸಮುದ್ರ ಸೇರುವವರೆಗೂ ಕೂಡ ಅದನ್ನು ಶುಚಿಯಾಗಿ ಕಳುಹಿಸತಕ್ಕಂಥ ಜವಾಬ್ದಾರಿ ಸರ್ಕಾರಕ್ಕಿದೆ. ಆದ್ದರಿಂದ, ದಯಮಾಡಿ ಇದನ್ನು ಮಾಡಬೇಕಾಗುತ್ತದೆ. ಅಭಿವೃದ್ಧಿ ವಿಚಾರದಲ್ಲಿ ಕಳೆದ 5 ವರ್ಷಗಳಲ್ಲಿ ನಮ್ಮ ಜಿಲ್ಲೆ ಮರೀಚಿಕೆಯಾಗಿದೆ. ನಮ್ಮ ಜಿಲ್ಲೆಗೆ ಏನೂ ಅನುಕೂಲವಾಗಿಲ್ಲ. ಹಾಗಾಗಿ ದಯಮಾಡಿ ಈ ಸರ್ಕಾರ ಅಭಿವೃದ್ಧಿ ವಿಚಾರದಲ್ಲಿ ಹೆಚ್ಚು ಗಮನಹರಿಸಬೇಕು. ದಯಮಾಡಿ ಉಸ್ತುವಾರಿ ಸಚಿವರು ಕೇವಲ ಬಾವುಟ ಹಾರಿಸುವುದಕ್ಕೆ, Independence Day ಗೋ Republic Day ಬಾವುಟ ಹಾರಿಸುವುದಕ್ಕೆ ಮಾತ್ರ ಬರುವುದನ್ನು ಬಿಟ್ಟು, ಆ ಜಿಲ್ಲೆಯ ಸಂಪೂರ್ಣವಾದ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಕೆಲಸವನ್ನು ಮಾಡಬೇಕಾಗುತ್ತದೆ. ಇನ್ನೊಂದು ಸುವರ್ಣ ಭೂಮಿ ಎಂದು ಕಳೆದ ಸರ್ಕಾರದಲ್ಲಿ ಈ ಮಳೆ ಬಿದ್ದಂಥ ಸಂದರ್ಭದಲ್ಲಿ ಸಣ್ಣ ಹಿಡುವಳಿದಾರ ರೈತರಿಗೆ 10 ಸಾವಿರ ರೂಪಾಯಿಗಳನ್ನು ಕಳೆದ ಸರ್ಕಾರ ಕೊಟ್ಟಿತ್ತು. ಮೊದಲು 5 ಸಾವಿರ ನಂತರ 2ನೇ ಸಲ 5 ಸಾವಿರ ಹೀಗೆ ಕೊಟ್ಟಿದ್ದರು. ಆದರೆ, ನಾನು ಪತ್ರಿಕೆಯಲ್ಲಿ ಓದಿದ ಹಾಗೆ ಈ ಸರ್ಕಾರದಲ್ಲಿ ಆ ಯೋಜನೆ ಜಾರಿಯಾಗಿದೆಯೋ ಇಲ್ಲವೋ ಎನ್ನುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ಆ ಹಣವನ್ನು ಕೊಟ್ಟರೆ ಬಹುಶಃ ಈ ಬರಗಾಲದಿಂದ ತತ್ತರಿಸಿರುವ ಜನರಿಗೆ ಸರ್ಕಾರದಿಂದ ಆಸರೆ ಕೊಟ್ಟ ಹಾಗೆ ಆಗುತ್ತದೆ. ಬಿತ್ತನೆ ಬೀಜ ಕೊಡಲಿಕ್ಕೆ

ಇರಬಹುದು, ಅಥವಾ ಗೊಬ್ಬರ ಕೊಡಲಿಕ್ಕೆ ಇರಬಹುದು, ಅದು ಒಂದು ಆಸರೆ ಆಗುತ್ತದೆ. ದಯಮಾಡಿ ಈ ಸರ್ಕಾರ ಸಹ ಆ ಯೋಜನೆಯನ್ನು ಜಾರಿಗೆ ತರಬೇಕು, ಹಣ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ 10 ಸಾವಿರ ರೂಪಾಯಿಗಳನ್ನು ಸಣ್ಣ ಹಿಡುವಳಿ ರೈತರಿಗೆ ಕೊಡುವ ವಿಚಾರ ಇತ್ತೀಚೆಗೆ ಶ್ರೀ ಜಗದೀಶ್ ಶೆಟ್ಟರ್‌ರವರು ಮಂಡಿಸಿದ ಬಜೆಟ್ ಭಾಷಣದಲ್ಲೂ ಸಹ ಇತ್ತು. ಅದನ್ನು ಈ ಸರ್ಕಾರ ಸಹ ಮುಂದುವರಿಸಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಅದಲ್ಲದೆ ಅಪೆಕ್ಸ್ ಬ್ಯಾಂಕ್ ವಿಚಾರದಲ್ಲಿ ಕಳೆದ ಅಧಿವೇಶನದ ಸಮಯದಲ್ಲೂ Apex Bank ನಲ್ಲಿ ನಡೆದಿರತಕ್ಕಂಥ appointment ನ ಅವ್ಯವಹಾರದ ಬಗ್ಗೆ ಇಲ್ಲಿ ಚರ್ಚೆ ಆಯಿತು. ಅದಕ್ಕೆ ಹಿಂದಿನ ಸರ್ಕಾರ stay ಸಹ ಕೊಟ್ಟಿತು. ಅದನ್ನು ಲೋಕಾಯುಕ್ತ ತನಿಖೆ ವ್ಯಾಪ್ತಿಗೆ ಒಳಪಡಿಸಿ ತಕ್ಷಣ ಯಾರಿಗೂ ಕೂಡ ಅಲ್ಲಿ appointment ಮಾಡಬಾರದೆನ್ನುವ ಆದೇಶ ಕೊಟ್ಟಿದ್ದರೂ ಸಹ ಅದನ್ನು overlook ಮಾಡಿ ಎಲ್ಲರಿಗೂ ಕೂಡ appointment order ಕೊಟ್ಟಿದ್ದಾರೆ. ಮಾನ್ಯ ಮಹದೇವ ಪ್ರಸಾದ್‌ರವರೆ, ದಯಮಾಡಿ ಈ ಕಡೆಗೆ ಗಮನಹರಿಸಬೇಕು. ಸರ್ಕಾರದ ಆದೇಶ ಇದ್ದರೂ ಕೂಡ ಅದನ್ನು ಯಾವ ರೀತಿ overlook ಮಾಡಿ ಅವರಿಗೆ ಆದೇಶವನ್ನು ಕೊಟ್ಟಿದ್ದಾರೆ, ದಯಮಾಡಿ ಅದನ್ನು ತೆಗೆಸಿ, ತನಿಖೆ ಆಗುವವರೆಗೂ ಕೂಡ ಕೊಟ್ಟಿರುವಂಥ appointment order ಅನ್ನು ರದ್ದು ಮಾಡುವುದು ಬೇಡ ತಡೆಹಿಡಿಯಿರಿ. ತದನಂತರ ನೀವು ಅದನ್ನು ಕೊಡಿ. ಹಾಗಾಗಿ ನಾನು ವಿನಂತಿ ಮಾಡಿಕೊಳ್ಳುತ್ತಿರುವುದೇನೆಂದರೆ, ಎಲ್ಲಾ ರೀತಿಯಲ್ಲಿ ನಮ್ಮ ಜಿಲ್ಲೆಯ ವಿಚಾರದಲ್ಲಿ ಸರ್ಕಾರ ಗಮನಹರಿಸಬೇಕು. ಹೆಚ್ಚು ಆಸಕ್ತಿ ಕೊಡಬೇಕು. ಇನ್ನೂ ಅನೇಕ ವಿಚಾರಗಳು ಇದ್ದರೂ ಕೂಡ ತಮ್ಮ ಒತ್ತಾಯದ ಮೇರೆಗೆ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಅಧ್ಯಕ್ಷರೆ, ಕೊನೆ ಗಳಿಗೆಯಲ್ಲಾದರೂ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. Well begun is half done, ಎನ್ನುವ ರೀತಿಯಲ್ಲಿ, ಮಾನ್ಯ ಮುಖ್ಯಮಂತ್ರಿಯವರು ಅನೇಕ ವಿಚಾರಗಳನ್ನು, ಅನೇಕ ಕಾರ್ಯಕ್ರಮಗಳನ್ನು ಬಡವರ ಸಲುವಾಗಿ ನಿರ್ಣಯ ಮಾಡುವುದರ ಮೂಲಕ ಜೊತೆಗೆ

ರಾಜ್ಯದಲ್ಲಿರುವ, ಇಡೀ ರಾಜ್ಯವನ್ನು ಒಂದು ರೀತಿಯಲ್ಲಿ ಅಭಿವೃದ್ಧಿ ಮಾಡುವಂಥ ಭರವಸೆ ಕೊಡುವುದರ ಜೊತೆಗೆ ರಾಜ್ಯದಲ್ಲಿರುವ ಎಲ್ಲಾ ನೀರಾವರಿ ಯೋಜನೆಗಳನ್ನು 5 ವರ್ಷಗಳಲ್ಲಿ ಮುಗಿಸುತ್ತೇವೆನ್ನುವಂಥ ಭರವಸೆಯನ್ನು ಕೊಟ್ಟಿದ್ದಾರೆ. ಸ್ವಾತಂತ್ರ್ಯ ಸಿಕ್ಕಿದ ನಂತರ ಇಲ್ಲಿಯವರೆಗೆ ಯಾವುದೇ ಸರ್ಕಾರ ಇರಬಹುದು ನಿಗದಿತ ಅವಧಿಯಲ್ಲಿ ಯಾವುದೇ ಕೆಲಸ ಮಾಡಿದ ಉದಾಹರಣೆ ಇಲ್ಲ.

ನಿಗದಿತ ಅವಧಿಯಲ್ಲಿ ಕೆಲಸ ಮಾಡಿದ ಉದಾಹರಣೆ ಇಲ್ಲ. 2009 ರಲ್ಲಿ ಅಮೆರಿಕದ ಸಿಯಾಟಲ್ ಸಿಟಿಗೆ ಹೋದ ಸಂದರ್ಭದಲ್ಲಿ ನಾನೊಂದು ಬೋರ್ಡು ನೋಡಿದೆ. 10–15 ಕಿ.ಮೀ.ರಸ್ತೆಯ ಕಾಮಗಾರಿ ಅದು, ಕೆಲಸ ಪ್ರಾರಂಭದ ದಿನಾಂಕ ಮತ್ತು ಕೆಲಸ ಮುಕ್ತಾಯದ ದಿನಾಂಕ ಎರಡನ್ನೂ ನಮೂದಿಸಿರುವ ಬೋರ್ಡನ್ನು ನಾನು ಓದಿದೆ. ಮುಕ್ತಾಯದ ದಿನಾಂಕ ನಂತರ ನಾನು ಆ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಬೋರ್ಡು ಇರಲಿಲ್ಲ ಜೊತೆಗೆ ಕೆಲಸ ಮುಗಿದಿತ್ತು. ಆದರೆ, ಸರ್ಕಾರದ ಯಾವುದೇ ಕೆಲಸಗಳು ಸರಿಯಾದ ಸಮಯಕ್ಕೆ ಮುಗಿಯಲಾರದಕ್ಕಾಗಿ ಸಮಯ ಮತ್ತು ಹಣ ಎರಡೂ ಉಳಿತಾಯವಾಗುವುದಿಲ್ಲ, ಜೊತೆಗೆ ಸಾರ್ವಜನಿಕರಿಗೂ ಸಹಿತ ಅದರ ಲಾಭ ಸಕಾಲದಲ್ಲಿ ತಲುಪುತ್ತಿಲ್ಲ ಎನ್ನುವ ಮಾತನ್ನು ಹೇಳಲಿಚ್ಚಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ನೀರಾವರಿ ಯೋಜನೆಗಳನ್ನು ಮುಗಿಸುವುದಷ್ಟೆ ಹೇಳಿದ್ದಾರೆ. ದುರ್ದೈವ ಏನೆಂದರೆ, ಬಾಗಲಕೋಟೆಯ ಆಲಮಟ್ಟಿ ಜಲಾಶಯದಲ್ಲಿ ಹೆಚ್ಚಿನ ಬಾಗಲಕೋಟೆ ಪಟ್ಟಣವನ್ನೊಳಗೊಂಡಂತೆ ಈಗಾಗಲೇ ನೂರಾರು ಹಳ್ಳಿಗಳು ಮುಳುಗಡೆಯಾಗಿವೆ. ಮತ್ತೆ 22 ಗ್ರಾಮಗಳು ಮುಳಗಡೆಯಾಗುವುದರ ಮುಖಾಂತರ 1 ಲಕ್ಷ 5 ಸಾವಿರ ಎಕರೆ ಜಮೀನನ್ನು ಸರ್ಕಾರ ಸ್ವಾಧೀನ ಮಾಡಲಿಕ್ಕೆ ಹೊರಟಿದೆ. ಅದರಲ್ಲಿ 90 ಸಾವಿರ ಎಕರೆ ನೀರಿನಲ್ಲಿ ಮುಳುಗುತ್ತಿದೆ. ಸರ್ಕಾರದ ಕೆಲಸ ಕೇವಲ ಪರಿಹಾರ ಕೊಟ್ಟರೆ ಮುಗಿಯುವುದಿಲ್ಲ. 3–4 ಲಕ್ಷ ಜನ ನಿರುದ್ಯೋಗಿಗಳಾಗುತ್ತಿದ್ದಾರೆ. ಈಗಾಗಲೇ ಪುನರ್‌ವಸತಿ ಕೇಂದ್ರದಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿರುವುದಿಲ್ಲ. ಸರಿಯಾದ ರಸ್ತೆಗಳಿಲ್ಲ, ತಿಪ್ಪೆಗುಂಡಿಗಳಿಲ್ಲ, ಬಣವೆ ಗಡ್ಡೆಗಳಿಲ್ಲ, ಚರಂಡಿಗಳಿಲ್ಲ, ಶೌಚಾಲಯಗಳಿಲ್ಲ. ಇಂಥ ಸ್ಥಿತಿಯೊಳಗೆ ಪುನರ್‌ವಸತಿ ಕೇಂದ್ರಗಳಿವೆ. ಇದ್ದರ ಜೊತೆಗೆ ನಮ್ಮ ಭಾಗದಲ್ಲಿ ಭೂಮಿಯ ಬೆಲೆ ಇವತ್ತೂ 25 ಲಕ್ಷ ಕೊಟ್ಟರೂ ಒಂದು ಎಕರೆ ಸಿಗುತ್ತಿಲ್ಲ.

ಹೀಗಿರುವಾಗ 90 ಸಾವಿರ ಎಕರೆ ನೀರಿನಲ್ಲಿ ಮುಳುಗಿದರೆ ಏನು ಪರಿಸ್ಥಿತಿ ಎಂಬುದನ್ನು ಸರ್ಕಾರ ಇಂದು ಕಲ್ಪನೆ ಮಾಡಬೇಕಾಗಿದೆ. ಸರ್ಕಾರದ ಕೆಲಸ ಕೇವಲ ಪರಿಹಾರ ಕೊಟ್ಟರೆ ಮುಗಿಯುವುದಿಲ್ಲ. 3–4 ಲಕ್ಷ ಜನ ನಿರುದ್ಯೋಗಿಗಳೇನಾಗುತ್ತಾರೆ ಅವರಿಗೆ ಉದ್ಯೋಗದ ಭರವಸೆ ಕೊಡಬೇಕಾಗಿದೆ. ಇವರಿಗಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಇದಕ್ಕೆ ದಯಮಾಡಿ ಕಟ್ಟಡಗಳಿಗೆ ಸರಿಯಾದ ಬೆಲೆ ಕೊಡುವ ಮುಖಾಂತರ ಜನರಿಗೆ, ನಿರುದ್ಯೋಗಿಗಳಿಗೆ, ಸಂತ್ರಸ್ತರಿಗೆ ನಗುನಗುತ್ತಾ ಪುನರ್‌ವಸತಿ ಕೇಂದ್ರಗಳಿಗೆ ಸ್ಥಳಾಂತರ ಮಾಡಬೇಕಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇದು ಬಹಳ ದೊಡ್ಡ ಸಮಸ್ಯೆಯಿದೆ. ಎಲ್ಲಿಯವರೆಗೆ ಮುಳುಗಡೆ ಭಾಗದ ಜನರ ಸಮಸ್ಯೆ ಬಗೆಹರಿಸುವುದಿಲ್ಲ ಅಲ್ಲಿಯವರೆಗೆ ನೀರಾವರಿ ಯೋಜನೆಗಳನ್ನು ಮಾಡಲಿಕ್ಕೆ ಸಾಧ್ಯವಿಲ್ಲವೆನ್ನುವಂಥ ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಪ್ರಥಮ ಆದ್ಯತೆಯನ್ನು ನೀವು ಮುಳುಗಡೆಯಾಗಿರುವ ಜನರ ಸಮಸ್ಯೆಗಳ ಕಡೆಗೆ ಕೊಟ್ಟು ತಮ್ಮ ಬಜೆಟ್‌ನಲ್ಲಿ ಈ ಬಗ್ಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಿಶ್ಚಿತವಾಗಿಯೂ ಈ ಪರಿಹಾರಕ್ಕಿಂತ ಹೆಚ್ಚು ಸಮಸ್ಯೆ ಜನರಿಗೆ ನಿರುದ್ಯೋಗ ಸಮಸ್ಯೆಗಳಿವೆ ಎಂದು ಹೇಳುತ್ತೇನೆ. ದಯಮಾಡಿ ಈ ಸಮಸ್ಯೆಗಳನ್ನು ಸರ್ಕಾರ ಬಗೆಹರಿಸಬೇಕೆಂದು ಹೇಳುತ್ತೇನೆ. ಮತ್ತೊಂದು ವಿಷಯ ಏನೆಂದರೆ, ಸನ್ಮಾನ್ಯ ಕಾರಜೋಳರವರು ಮಾತನಾಡುವಾಗ ಡಿ–ನೋಟಿಫಿಕೇಷನ್ ಬಗ್ಗೆ ಮಾತನಾಡಿದರು. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಕಳೆದ ಸರ್ಕಾರದಲ್ಲಿ 19 ಸಾವಿರ ಎಕರೆ ಐತಿಹಾಸಿಕವಾದಂಥ ಡಿ–ನೋಟಿಫಿಕೇಷನ್ ಆಗಿದೆ. 19 ಸಾವಿರ ಎಕರೆ ಯಾರ್ಯಾರಿಗೆ ಹಸ್ತಾಂತರವಾಗಿದೆ ದಯಮಾಡಿ ಆ ಮಾಹಿತಿಯನ್ನು ಸದನದ ಸದಸ್ಯರ ಗಮನಕ್ಕೆ ಕೊಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ 2007 ರಲ್ಲಿ ಇದೇ ಸದನ ರೈತರ ಸಲುವಾಗಿ ಒಂದು ಕಾನೂನು ಮಾಡಿದೆ. ರೈತರು ತಮ್ಮ ಮಾಲನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗುತ್ತಾರೆ, ಅಂಗಡಿಯ ಮಾಲೀಕರು ಮಾಲು ಮಾರಾಟವಾದ ನಂತರ ಐದು ದಿವಸದೊಳಗೆ ಅದರ ಪಟ್ಟಿ ಕೊಡಬೇಕು. ಕೊಡಲಾರದೆ ಹೋದರೆ ಪ್ರತಿ ದಿವಸ 1% ಬಡ್ಡಿ ಕೊಡಬೇಕು, 5 ದಿವಸಗಳಾಗಿ 6 ನೇ ದಿವಸಕ್ಕೆ ಆ ದಲ್ಲಾಳಿಯ ಲೈಸೆನ್ಸ್ ಕ್ಯಾನ್ಸೆಲ್ ಮಾಡಬೇಕೆಂದು ಇದೆ. ಅದರ ಸಲುವಾಗ ಸರ್ಕಾರ ಈ ಬಗ್ಗೆ ಕೇಳಬೇಕಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ನಾನು ತಮ್ಮಲ್ಲಿ ವಿನಂತಿ

ಮಾಡಿಕೊಳ್ಳುವುದೇನೆಂದರೆ, ಎಲ್ಲಿಯವರೆಗೆ ಬಾಗಲಕೋಟ ಜಿಲ್ಲೆಯ ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾಗುವಂಥ ಸಂತ್ರಸ್ತರ ಸಮಸ್ಯೆ ಬಗೆಹರಿಸುವುದಿಲ್ಲ ಅಲ್ಲಿಯವರೆಗೆ ನೀರಾವರಿ ಯೋಜನೆಗಳು ಪೂರ್ಣಗೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಪ್ರಸನ್ನ ಕುಮಾರ್ ಕೆ.ಬಿ.(ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಚುನಾವಣಾ ಪೂರ್ವದಲ್ಲಿ ನಾಡಿನ ಜನತೆಗೆ ಕೊಟ್ಟ ಎಲ್ಲಾ ಭರವಸೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸಾಗುತ್ತಿರುವ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮುಖ್ಯವಾಗಿ ನಮ್ಮ ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಹಲವಾರು ವರ್ಷಗಳಿಂದ ವಾಸಿಸುತ್ತಿರುವ ನಿವಾಸಿಗಳಿಗೆ ಪರಿಚಯ ಪತ್ರ ಕೊಟ್ಟಿದ್ದಾರೆ. ಅದರ ಮುಂದಿನ ವ್ಯವಸ್ಥೆ ಹಕ್ಕುಪತ್ರಗಳನ್ನು ಇನ್ನೂ ಸಹ ಕೊಟ್ಟಿಲ್ಲ. ಅಧಿಕಾರಗಳನ್ನು ಕೇಳಿದರೆ ಹಲವಾರು ಸಬೂಬುಗಳನ್ನು ಹೇಳುತ್ತಾರೆ. ದಯಮಾಡಿ ಅವರಿಗೆ ಹಕ್ಕುಪತ್ರ ಕೊಡಿಸಿ, ಅವರಿಗೆ ಖಾತೆಗಳನ್ನು ಮಾಡಿಸಿ ಕೊಡಬೇಕು ಮತ್ತು ಆ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಅನುದಾನದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಶಿವಮೊಗ್ಗ ನಗರದ ತುಂಗಾ ನದಿಗೆ ದೊಡ್ಡ ದೊಡ್ಡ ಚರಂಡಿಗಳಿಂದ ಮಲೀನ ನೀರು ಬಂದು ಸೇರುತ್ತಿದೆ. ಗಾದೆ ಯಾವತ್ತಿಗೂ ಸುಳ್ಳಾಗುವುದಿಲ್ಲ. " ತುಂಗಾ ಪಾನ ಗಂಗಾ ಸ್ನಾನ " ಎನ್ನುವ ಗಾದೆ ಇದೆ. ಆದರೆ, ನಮ್ಮ ಶಿವಮೊಗ್ಗದಲ್ಲಿ ಅದು ಸುಳ್ಳಾಗುವಂಥ ವ್ಯವಸ್ಥೆ ನಡೆಯುತ್ತಿವೆ. ದಯಮಾಡಿ ಆ ಕೊಳಚೆ ನೀರು ನದಿಗೆ ಸೇರದಿರುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಿಂತು ಹೋಗಿರುವ ವೃದ್ಧಾಪ್ಯ ವೇತನ, ವಿಧವಾ ವೇತನ, ಸಕಾಲಕ್ಕೆ ಅವರಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡಿ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಗರದಲ್ಲಿ ಒಳಚರಂಡಿ ಕಾಮಗಾರಿ ಮಾಡುವುದಕ್ಕೆ ಶುರು ಮಾಡಿ ಎಲ್ಲಾ ಅರ್ಧಂಬರ್ಧ ಮಾಡಿ ನಿಲ್ಲಿಸಿದ್ದಾರೆ. ರಸ್ತೆಗಳು ತುಂಬಾ ಹಾಳಾಗಿವೆ. ಹತ್ತು ನಿಮಿಷ ಸಣ್ಣದಾಗಿ ಮಳೆ ಬಂದರೂ ಯೂನಿಫಾರ್ಮ್ ಹಾಕಿಕೊಂಡಿರುವಂಥ ಸ್ಕೂಲ್ ಮಕ್ಕಳು ಓಡಾಡುವುದಕ್ಕಾಗುತ್ತಿಲ್ಲ. ಇದರಿಂದಾಗಿ ಬಹಳ ತೊಂದರೆಯಾಗಿದೆ. ಇದನ್ನು ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಗೆ

ತಿಳಿಸಿ ಸರಿಪಡಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಲವಾರು ಸಾಂಕ್ರಾಮಿಕ ರೋಗಗಳು ಶುರುವಾಗಿವೆ, ಮಲೇರಿಯಾ ಇರಬಹುದು, ಡೆಂಗ್ಯೂ ಇರಬಹುದು, ದಯಮಾಡಿ, ಶುಚಿತ್ವದ ಕಡೆಗೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಊರಿನಲ್ಲಿ ದಿನವೂ ನಗರ ಸಭೆಯಿಂದ ಏನು clean ಮಾಡುವ ವ್ಯವಸ್ಥೆ ಇದೆ, ಅದಕ್ಕೆ ಪೌರ ಕಾರ್ಮಿಕರು ಕಡಿಮೆಯಾಗಿದ್ದಾರೆ. 35 ವಾರ್ಡ್ ಇರುವ ಒಂದು ಊರಿನಲ್ಲಿ, ಒಂದು ವಾರ್ಡ್‌ಗೆ ನಾಲ್ಕು ಜನ ಇಲ್ಲ. ಆದ್ದರಿಂದ ಪೌರ ಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸುವ ವ್ಯವಸ್ಥೆಯನ್ನು ಮಾಡಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮ ಮಲೆನಾಡು ಭಾಗದಲ್ಲಿ ಬಹಳ ರಮಣೀಯವಾದಂಥ ಪ್ರದೇಶಗಳಿವೆ. ಮುಖ್ಯವಾದ ಕೆಲವು ಪ್ರವಾಸಿ ತಾಣಗಳನ್ನು ಗುರುತಿಸಿ ಅವುಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿ ಪಡಿಸಬೇಕೆಂದು ಕೇಳಿಕೊಳ್ಳಲು ಇಷ್ಟಪಡುತ್ತೇನೆ. ನಮ್ಮ ಮಲೆನಾಡು ಭಾಗದ ಯುವಕ–ಯುವತಿಯರಿಗೆ ಮುಖ್ಯವಾಗಿ ಕೆಲಸದ ತೊಂದರೆಗಳಿಂದ ದೂರದ ಪ್ರದೇಶಗಳಿಗೆ ಕೆಲಸವನ್ನರಸಿ ಬರುತ್ತಿದ್ದಾರೆ. ಅವರಿಗೆ ಅಲ್ಲಿಯೇ ಕೆಲಸ ಸಿಗುವಂಥ ಕೆಲಸ ಮಾಡಬೇಕು. ಮನೆಯಲ್ಲಿ ಹಿರಿಯರಾದ ತಂದೆ–ತಾಯಿಗಳು ಇದ್ದು ಅವರು ವೃದ್ಧಾಶ್ರಮ ಸೇರುವಂತಾಗುತ್ತಿದೆ. ಮಕ್ಕಳು ದೂರದಲ್ಲಿ ವಾಸ ಮಾಡುತ್ತಿದ್ದು ಅವರನ್ನು ಕೇಳುವವರು ಹೇಳುವವರು ಇಲ್ಲದಂತಾಗಿದೆ. ದಯಮಾಡಿ ಗುಡಿ ಕೈಗಾರಿಕೆಗೆ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳತ್ತಾ, ಗುಡಿ ಕೈಗಾರಿಕೆ ನಡೆಸುವವರಿಗೆ ಕೈಗಾರಿಕೆ ಪ್ರದೇಶವನ್ನು ಕೊಡುವಂಥ ವ್ಯವಸ್ಥೆ ಮಾಡಿ, ಅಲ್ಲಿ ಮೂಲಭೂತ ವ್ಯವಸ್ಥೆಗಳನ್ನು ಕೊಟ್ಟು ಕೈಗಾರಿಕೆಗೆ ಒತ್ತು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿಂತು ಹೋಗಿರುವ airport ಕಾಮಗಾರಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅದನ್ನು ಪುನಃ ಶುರು ಮಾಡಿ ಆದಷ್ಟು ಬೇಗ ಆ ಕಾಮಗಾರಿಯನ್ನು ಮುಗಿಸಿ ಕೊಡುವಂಥ ವ್ಯವಸ್ಥೆ ಮಾಡಿಸಿ ಕೊಡಿ ಎಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೋರಿಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಸಾ.ರಾ.ಮಹೇಶ್(ಕೆ.ಆರ್.ನಗರ) :– ಮಾನ್ಯ ಸಭಾದ್ಯಕ್ಷರೆ, ರಾಜ್ಯ ವಿಧಾನಮಂಡಲದಲ್ಲಿ ಮಾಡಿದ ರಾಜ್ಯಪಾಲರ ಭಾಷಣದ ಮೇಲೆ ನನ್ನ

ಅಭಿಪ್ರಾಯವನ್ನು ಸಲ್ಲಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈ ರಾಜ್ಯದ ಮುಖ್ಯಮಂತ್ರಿಗಳು ನಮ್ಮ ಮೈಸೂರು ಜಿಲ್ಲೆಗೆ ಸೇರಿದವರಾಗಿದ್ದಾರೆ. ಅನೇಕ ವಿಚಾರಗಳನ್ನು ಈ ಒಂದು ಪುಸ್ತಕದಲ್ಲಿ ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ನನ್ನ ಭಾವನೆ ಏನೆಂದರೆ, ಅವರ ಮನಸ್ಸಿನಲ್ಲಿದ್ದಂಥ ಅನೇಕ ವಿಚಾರಗಳನ್ನು ಈ ಪುಸ್ತಕದಲ್ಲಿ ಪ್ರಿಂಟ್ ಮಾಡಿಸಿದ ನಂತರ ಅದು ಕೇವಲ ಬರವಣಿಗೆ ಆಗಬಾರದು. ಸಾಧ್ಯವಾದಷ್ಟು ಕಾರ್ಯರೂಪಕ್ಕೆ ಬರಬೇಕೆಂದು ತಮ್ಮ ಮೂಲಕ ಅವರಿಗೆ ಮನವಿಯನ್ನು ಮಾಡುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಬಹು ಮುಖ್ಯವಾದ ಸಮಸ್ಯೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಟ್ರಾನ್ಸ್‌ಫಾರ್ಮರ್ ಸಮಸ್ಯೆ. ಬಹುಶಃ ಇದು ರಾಜ್ಯದ ಎಲ್ಲ ಕಡೆ ಇರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಸಾಮಾನ್ಯವಾಗಿ ತಾಲ್ಲೂಕಿನ ಎಲ್ಲ ಕೇಂದ್ರಗಳಲ್ಲಿ ಟಿ.ಸಿ. ಯ ರಿಪೇರಿ ಸೆಂಟರ್‌ಗಳು ಇರುತ್ತವೆ. ಆದರೆ, ನನ್ನ ಕ್ಷೇತ್ರದಲ್ಲಿ ಅದು ಇಲ್ಲ. ಒಂದೊಂದು ಸಾರಿ ಟಿ.ಸಿ. ಕೆಟ್ಟರೆ ರೈತರು ಎತ್ತಿನಗಾಡಿಯಲ್ಲಿ ತೆಗೆದುಕೊಂಡು ಹೋಗಿ ರಿಪೇರಿ ಮಾಡಿಸಿ ವಾಪಸ್ಸು ತಂದು ಹಾಕುವಂಥ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿದೆ. ಇವತ್ತಿನದಿವಸ ಮತದಾರರನ್ನು ಸೆಳೆಯುವಂಥ ಸ್ಕೀಂಗಳಿಗೆ ಹಣವನ್ನು ಕೊಡುವುದಕ್ಕಿಂತ ಶಾಶ್ವತವಾದಂಥ ಕೆಲಸಗಳಿಗೆ ಹಣವನ್ನು ಕೊಡುವ ಕಡೆ ಈ ಸರ್ಕಾರ ಗಮನವನ್ನು ಹರಿಸಲೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡುತ್ತೇನೆ. ಹಾಗೆಯೇ, ಆರೋಗ್ಯ, ಶಿಕ್ಷಣ, ಉದ್ಯೋಗ ಹಾಗೂ ಪೌಷ್ಟಿಕ ಆಹಾರದ ಪೂರೈಕೆಗೆ ಹೆಚ್ಚು ಗಮನವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ಆರೋಗ್ಯದ ವಿಚಾರದ ಬಗ್ಗೆ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುವುದೇನೆಂದರೆ, ನಮ್ಮ ತಾಲ್ಲೂಕಿನ ಒಂದು ಉದಾಹರಣೆ ಕೊಡುವುದಕ್ಕೆ ಬಯಸುತ್ತೇನೆ. ನಮ್ಮ ತಾಲ್ಲೂಕಿನ ಆರೋಗ್ಯ ಇಲಾಖೆಯಲ್ಲಿ 252 ಹುದ್ದೆಗಳಿವೆ. ಆದರೆ, 98 ಹುದ್ದೆಗಳು ನನ್ನ ಕ್ಷೇತ್ರವಾದ ಒಂದೇ ಒಂದು ತಾಲ್ಲೂಕಿನಲ್ಲಿ ಖಾಲಿ ಇವೆ. ಆರೋಗ್ಯ ಇಲಾಖೆಯದು essential service ಎಂದು ಹೇಳುತ್ತೇವೆ. ಒಂದೊಂದು ತಾಲ್ಲೂಕಿನಲ್ಲಿರುವ ಆರೋಗ್ಯ ಇಲಾಖೆಯಲ್ಲಿ ಸುಮಾರು 100 ಜನ ನೌಕರರು ಕಡಿಮೆ ಇದ್ದರೆ ಆರೋಗ್ಯದ ಸುಧಾರಣೆ ಹೇಗೆ ಆಗುತ್ತದೆಂಬುದನ್ನು ಮಾನ್ಯ ಸಭಾಧ್ಯಕ್ಷರು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ

ಬಯಸುತ್ತೇನೆ. ಹಾಗೆಯೇ, ಆರೋಗ್ಯದ ವಿಚಾರದ ಬಗ್ಗೆ ಹೇಳುವುದಾದರೆ, ಯಶಸ್ವಿನಿ ಯೋಜನೆ ಮತ್ತು ಹಿಂದೆ ಇದ್ದಂಥ ಸರ್ಕಾರ ತಂದಂಥ ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಹಾಗೂ ಬೇರೆ ಬೇರೆ ಸ್ಕೀಂಗಳು ಇವತ್ತು ಇವೆ. ಒಬ್ಬ class-2 officer ಸಹ ಕಾಯಿಲೆಗೆ ವೆಚ್ಚವನ್ನು ಭರಿಸುವುದಕ್ಕೆ ತುಂಬಾ ಕಷ್ಟ ಇರತಕ್ಕಂಥದ್ದು ತಮಗೂ ಸಹ ಗೊತ್ತಿದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಬಿಪಿಎಲ್, ಎಪಿಎಲ್ ಎನ್ನುವುದನ್ನು ಬಿಟ್ಟು ಈ ರಾಜ್ಯದಲ್ಲಿರುವ ಕಟ್ಟ ಕಡೆಯ ವ್ಯಕ್ತಿಯಿಂದ ಹಿಡಿದು ಯಾರಿಗೆ ಅವಶ್ಯಕತೆ ಇರುತ್ತದೆಯೋ ಅಂಥವರಿಗೆಲ್ಲರಿಗೂ ಸಹ ಆರೋಗ್ಯದ ವೆಚ್ಚವನ್ನು ಬರಿಸುವಂಥ ನಿರ್ಧಾರವನ್ನು ಸರ್ಕಾರ ದಯಮಾಡಿ ಮಾಡಬೇಕೆಂದು ತಮ್ಮ ಮೂಲಕ ಮನವಿಯನ್ನು ಮಾಡುತೇನೆ. ಹಾಗೆಯೇ ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ಹೇಳುವುದಾದರೆ, ಸುಮಾರು ಒಂದು ವರ್ಷದೊಳಗೆ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ತಾಯಂದಿರು ಪಡೆದುಕೊಳ್ಳಬೇಕಾಗುತ್ತದೆ. ಇದನ್ನು ಪಡೆದುಕೊಳ್ಳುವುದಕ್ಕೆ ಬಿ.ಪಿ.ಎಲ್. ಕಾರ್ಡ್ ಅನ್ನು ಕಡ್ಡಾಯ ಮಾಡಿದ್ದಾರೆ. ಇವತ್ತಿನದಿವಸ ಬಿ.ಪಿ.ಎಲ್. ಕಾರ್ಡ್‌ನ್ನು ಸರ್ಕಾರ ಕೊಡದೇ ಇರುವಾಗ ಅನೇಕ ಜನ ಭಾಗ್ಯಲಕ್ಷ್ಮಿ ಯೋಜನೆಯಿಂದ ವಂಚಿತರಾಗಿದ್ದಾರೆ. ಆದ್ದರಿಂದ, ಇವರ ಬಗ್ಗೆ ದಯಮಾಡಿ ವಿಶೇಷವಾದಂಥ ಗಮನಹರಿಸಿ ಬಿ.ಪಿ.ಎಲ್.ಕಾರ್ಡ್ ಬರುವವರೆಗೆ ತಹಶೀಲ್ದಾರ್‌ರವರು ಕೊಡುವಂಥ ಆದಾಯ ಪತ್ರವನ್ನು ಪರಿಗಣನೆ ಮಾಡಿ ಅವರಿಗೆ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ಕೊಡುವ ಬಗ್ಗೆ ಗಮನಹರಿಸಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ಇವತ್ತು ಬೆಳಿಗ್ಗೆ ನಮ್ಮ ಸ್ನೇಹಿತರು ಸರ್ವೇಯರ್ ಬಗ್ಗೆ ಮಾತನಾಡುತ್ತಾ ಸರ್ವೇ ನಕ್ಷೆಯನ್ನು ಮೂರ್ನಾಲ್ಕು ತಿಂಗಳಾದರೂ ಕೊಡುವುದಿಲ್ಲವೆಂದು ಹೇಳಿದರು. ಹಿಂದಿನ ಸರ್ಕಾರ ಸರ್ವೇ ಇಲಾಖೆಯಲ್ಲಿ ಸರ್ವೇಯರ್‌ಗಳನ್ನು ನೇಮಕಾತಿ ಮಾಡಿರುವುದನ್ನು ತಡೆಹಿಡಿಯುವಂಥ ಕೆಲಸ ಆಗಿದೆ. ದಯಮಾಡಿ ಅವರನ್ನು ನೇಮಕಾತಿ ಮಾಡಿದರೆ ಈ ಕೆಲಸಕ್ಕೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಭ್ರಷ್ಟಾಚಾರ ಮತ್ತು ಭ್ರಷ್ಟ ಅಧಿಕಾರಿಗಳಿಗೆ ಮಣೆ ಹಾಕುವುದಿಲ್ಲವೆಂಬುದು ಇದರಲ್ಲಿದೆ. ತಾವು ಆ ಕಡೆಗೆ ಗಮನಹರಿಸಬೇಕೆಂದರೆ, ಇವತ್ತಿನದಿವಸ ಇಡೀ ರಾಜ್ಯದಲ್ಲಿ ಅಡುಗೆ ಸಹಾಯಕರಾಗಿ ಕೆಲಸ ಮಾಡುತ್ತಿರುವವರಿಗೆ ಕೇವಲ 2000 ಸಂಬಳವನ್ನು

ತಾವು ಕೊಡುತ್ತಿದ್ದೀರಿ. 2000 ರೂಪಾಯಿ ಸಂಬಳವನ್ನು ತೆಗೆದುಕೊಂಡು ಅವರ ಹೊಟ್ಟೆಯೇ ತುಂಬಿಸಿಕೊಳ್ಳುವುದಕ್ಕೆ ಆಗದೆ ಇರತಕ್ಕಂಥ ಪರಿಸ್ಥಿತಿ ಇರುವಾಗ ಭ್ರಷ್ಟಾಚಾರ ರಹಿತ ಆಡಳಿತವನ್ನು ಕೊಡುತ್ತೇವೆ ಎನ್ನವುದಾದರೆ, ದಯವಿಟ್ಟು ಅವರ ವೇತನವಾದರೂ ಜಾಸ್ತಿ ಮಾಡಬೇಕಾಗುತ್ತದೆ ಎಂಬ ಮಾತನ್ನು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆದು ನನ್ನ ಮಾತನ್ನು ಮುಗಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ.

ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) :– ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮೊದಲನೆಯದಾಗಿ ಇವತ್ತಿನದಿವಸ ಕುಡಿಯುವ ನೀರಿನ ಬಗ್ಗೆ ಬಹಳ ತೀವ್ರತರವಾದ ಸಮಸ್ಯೆಯನ್ನು ನಾವು ನೋಡುತ್ತಿದ್ದೇವೆ. ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಎರಡು ರೀತಿ ಹೇಳಿದ್ದಾರೆ. ಕುಡಿಯುವ ನೀರಿಗೆ ಹೆಚ್ಚಿನ ಒತ್ತನ್ನು ಕೊಡುತ್ತೇವೆಂದು ಒಂದು ಕಡೆ ಹೇಳುತ್ತಾರೆ. ಅಂತರ್ಜಲ ಮಿತಿ ಮೀರಿದರೆ ಅದರ ಬಗ್ಗೆ ಕೂಡ ಚಿಂತನೆ ಮಾಡುತ್ತೇವೆಂದು ಇನ್ನೊಂದು ಕಡೆ ಹೇಳುತ್ತಾರೆ. ಹಾಗಾದರೆ, ಕುಡಿಯುವ ನೀರು ಹೇಗೆ ಕೊಡುವುದು? ನನ್ನ ಸಲಹೆ ಏನೆಂದರೆ, ಈಗ ಫ್ಲೋರೈಡ್ ವಾಟರ್‌ನ ಸಮಸ್ಯೆ ಜಾಸ್ತಿ ಇದೆ. ನಮ್ಮ ಜಿಲ್ಲೆಯಲ್ಲಿ ನನ್ನ ಸ್ನೇಹಿತರು ಇರುವ ಪಾವಗಡ ತಾಲ್ಲೂಕಿನಲ್ಲಿ ಈ ಫ್ಲೋರೈಡ್ ವಾಟರ್‌ನ ಸಮಸ್ಯೆ ಬಹಳಷ್ಟಿದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಬೋರ್‌ವೆಲ್‌ಗೆ ಹೆಚ್ಚು ಒತ್ತು ಕೊಡುವುದರ ಬದಲು surface water ಗೆ ಹೆಚ್ಚಿನ ಒತ್ತನ್ನು ಕೊಡ–ಬೇಕಾಗುತ್ತದೆ. ವಿಶೇಷವಾಗಿ ಸನ್ಮಾನ್ಯ ಡಾ:ಪರಮಶಿವಯ್ಯನವರ ವರದಿಯನ್ನು ಜಾರಿ ಮಾಡಿದರೆ ನಮಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮುಸ್ಲಿಂಸ್‌ಗೆ ಎನ್.ಆರ್.ಇ. ಅವಕಾಶ ಮಾಡಿಕೊಡುತ್ತೇವೆಂದು ಇನ್ನೊಂದು ಕಡೆ ಹೇಳಿದ್ದಾರೆ. ಈಗಲೂ ಸಹ ಅದಕ್ಕೆ ಅವಕಾಶ ಇದೆ. ಆದರೆ, ಅಲ್ಲಿ ಜಾತಿ ಹೇಳಿಲ್ಲ. ಯಾರು ಬೇಕಾದರೂ ಹೋಗಿ ಕೆಲಸ ಮಾಡಿ ಸಂಬಳ ತೆಗೆದುಕೊಳ್ಳಬಹುದು. ಇದು ವಿಶಿಷ್ಟ ಎಂದು ಬರೆದಿರತಕ್ಕಂಥದ್ದು ಬಹುಶಃ ಇದು ಒಳ್ಳೆಯ ಚಿಂತನೆ ಅಲ್ಲವೆಂಬುದು ನನ್ನ ಭಾವನೆ. ನಮ್ಮ ಗೆಳೆಯರು ಹೇಳಿದಂತೆ ಟಿ.ಸಿ. ಬಗ್ಗೆ ಹೇಳುವುದಾದರೆ, ಕಳೆದ ಒಂದೂವರೆ ವರ್ಷಗಳಿಂದ ಪ್ರತಿಯೊಬ್ಬ ರೈತನಿಂದ 16 ಸಾವಿರ ರೂಪಾಯಿ

ಕಲೆಕ್ಟ್ ಮಾಡಿದ್ದಾರೆ. ಆದರೆ, ಇವತ್ತಿನವರೆಗೆ ಅವರಿಗೆ ಟಿ.ಸಿ. ಕೊಟ್ಟಿಲ್ಲ. ಮತ್ತೆ ಈಗ ಟಿ.ಸಿ. ಕೂಡ ಸಿಗುತ್ತಿಲ್ಲ. ಆದ್ದರಿಂದ, ಟಿ.ಸಿ. ಬಗ್ಗೆ ಹೆಚ್ಚಿನ ಒತ್ತನ್ನು ಕೊಡಬೇಕು. ಬೆಂಗಳೂರು ನಗರದಲ್ಲಿ ಇವತ್ತಿನದಿವಸ ಒಂದು ಕೋಟಿ ಜನಸಂಖ್ಯೆಯನ್ನು ಮೀರುತ್ತಿದೆ. ಇಲ್ಲಿ ಕುಡಿಯುವ ನೀರು ಸಿಗುತ್ತಿಲ್ಲ ಮತ್ತೆ ಒಳ್ಳೆಯ ಗಾಳಿ ಬೆಳಕು ಸಿಗುತ್ತಿಲ್ಲ. ಬೆಂಗಳೂರು ನಗರದಿಂದ ಗೆದ್ದಿರುವಂಥ ಮಾನ್ಯ ದಿನೇಶ್ ಗುಂಡೂರಾವ್ ಸಚಿವರಾಗಿದ್ದಾರೆ. ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದೇನೆಂದರೆ, ನ್ಯೂ ಡೆಲ್ಲಿಯಲ್ಲಿ ಮಾಡಿರುವಂತೆ ಇಲ್ಲಿಯೂ ಕೂಡ ನ್ಯೂ ಬೆಂಗಳೂರು ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಬೆಂಗಳೂರಿನಲ್ಲಿ ಬಡವರು ಸೈಟ್ ತೆಗೆದುಕೊಂಡು ಜೀವನ ಮಾಡುವುದಕ್ಕೆ ಆಗುವುದಿಲ್ಲ. ಇಂಡಿಯಾದಲ್ಲಿಯೇ ಬೆಂಗಳೂರು ಬಹಳ costliest place ಆಗಿದೆ. ಆದ್ದರಿಂದ, ನ್ಯೂ ಬೆಂಗಳೂರು ಎಂದು ಹೊಸದಾಗಿ ಪ್ರಾರಂಭ ಮಾಡಿದರೆ ಬಡವರಿಗೆ ಅನುಕೂಲವಾಗುತ್ತದೆ. ಮತ್ತೊಂದು ವಿಚಾರ ಏನೆಂದರೆ, ಲೋಕಾಯುಕ್ತರನ್ನು ನೇಮಕಾತಿ ಮಾಡಿಲ್ಲವೆಂದು ನಾವು ಮತ್ತು ಕಾಂಗ್ರೆಸ್ ಪಕ್ಷದವರು ವೆಲ್‌ನಲ್ಲಿ ನಿಂತು ಕೂಗಾಡಿದೆವು. ಆನಂತರ ನೇಮಕಾತಿ ಕೂಡ ಆಯಿತು. ಇದರಲ್ಲಿ ಲೋಕಾಯುಕ್ತ ಬಗ್ಗೆ ಒಂದು ಚಕಾರ ಸಹ ಎತ್ತಿಲ್ಲ. ಲೋಕಾಯುಕ್ತವನ್ನು strengthen ಮಾಡುತ್ತೀರಾ ಅಥವಾ ಈಗ ಇರುವ ರೀತಿಯಲ್ಲಿ ಸುಮ್ಮನೆ ಉಳಿದುಕೊಳ್ಳಬೇಕೆಂಬುದು ಚಿಂತನೆ ಆಗಿದೆಯೇ? ಮೈನ್ಸ್ ಮಿನರಲ್ಸ್ ಮತ್ತು ಭ್ರಷ್ಟಾಚಾರದ ಬಗ್ಗೆ ಮತ್ತು ಇತರೆ ವಿಷಯಗಳ ಬಗ್ಗೆ ಇಲ್ಲಿಂದ ಬಳ್ಳಾರಿಯವರೆಗೆ ಪಾದ ಪಾತ್ರೆಯನ್ನು ಮಾಡಿದರು. ಆದರೆ, ಈ ಪುಸ್ತಕದಲ್ಲಿ ಅದರ ಬಗ್ಗೆ ಒಂದು ವ್ಯಾಖ್ಯಾನ ಇಲ್ಲ. ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಹೋರಾಟ ಮಾಡಿ ಕೇವಲ ರಾಜಕಾರಣ ಮಾಡುವುದಲ್ಲ ಅಥವಾ ನೀವು ಸೀಟ್‌ಗಳಿಸುವುದಕ್ಕೆ ಮಾಡಲಾಯಿತಾ? ಅದಕ್ಕೆ ಏನಾದರೂ ಪ್ರಾಮಾಣಿಕತೆ ಇತ್ತಾ ಎಂಬುದು ನನ್ನ ಚಿಂತನೆ. ಮಾನ್ಯ ಸಂತೋಷ್ ಹೆಗ್ಡೆಯವರು ನೀಡಿದಂಥ ಲೋಕಾಯುಕ್ತ ವರದಿಯಿಂದ ಒಬ್ಬ ಮುಖ್ಯಮಂತ್ರಿ ತಮ್ಮ ಸ್ಥಾನವನ್ನೇ ಕಳೆದುಕೊಂಡರು. ಲೋಕಾಯುಕ್ತವರದಿಯನ್ನು ಅನಿಷ್ಠಾನ ಮಾಡುತ್ತೀರಾ? ಮಾನ್ಯ ಅಶೋಕ್‌ರವರೆ ನಾವೂ ನೀವೆಲ್ಲ ಸೇರಿ ಈ ಬಗ್ಗೆ ಹೋರಾಟ ಮಾಡಿದ್ದೇವೆ. ಇದರ ಬಗ್ಗೆ ಒಂದೇ ಒಂದು ಲೈನ್ ಇಲ್ಲ. ವರ್ಷಾನುಗಟ್ಟಲೆ ಪ್ರಿಪೇರ್ ಮಾಡಿ ಕೊಟ್ಟಿಂಥ

ಲೋಕಾಯುಕ್ತ ವರದಿಯ ಬಗ್ಗೆ ಸರ್ಕಾರದವರು ಏನು ಚಿಂತನೆ ಮಾಡಿದ್ದೀರಿ? ಅದನ್ನು ಏನಾದರೂ **cold storage** ಗೆ ಹಾಕುತ್ತೀರಾ? ಅಥವಾ ಅದರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಕೇವಲ ಹೋರಾಟ, ಪಾದಯಾತ್ರೆ ನಿಮ್ಮ ಹಠಕ್ಕೆ ಪ್ರಚಾರವಾಯಿತೆ? ಅಥವಾ ಇದರ ಬಗ್ಗೆ ಪ್ರಾಮಾಣಿಕತೆ ನಿಮಗೆ ಇದೆಯೇ ಎಂಬುದು ಸರ್ಕಾರಕ್ಕೆ ನನ್ನ ಪ್ರಶ್ನೆಯಾಗಿದೆ ಎಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಟಿ.ದೇವೇಗೌಡ (ಚಾಮುಂಡೇಶ್ವರಿ) :– ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ವಂದನಾನಿರ್ಣಯ ಭಾಷಣದ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ದಿನಾಂಕ 3–05–2013 ರಂದು ಕರ್ನಾಟಕ ರಾಜ್ಯದಲ್ಲಿ ಜನಾದೇಶದ ಪ್ರಕಾರ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮಾನ್ಯ ಸಿದ್ದರಾಮಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾರೆ. ಅದೇ ರೀತಿಯಾಗಿ ಮಾನ್ಯ ಕುಮಾರಸ್ವಾಮಿಯವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಮಾನ್ಯ ಮಹದೇವ ಪ್ರಸಾದ್‌ರವರು ಮತ್ತು ನಾವೆಲ್ಲರೂ ಕೂಡ 1994ನೇ ಇಸವಿಯಲ್ಲಿ ಬಂದಾಗ ಮಾನ್ಯ ದೇವೇಗೌಡರು ಮೊದಲು ಮುಖ್ಯಮಂತ್ರಿಯಾಗಬೇಕು ಆನಂತರ ಮಾನ್ಯ ಸಿದ್ದರಾಮಯ್ಯನವರು ಮುಖ್ಯ ಮಂತ್ರಿಯಾಗಬೇಕೆಂದು ನಾವೆಲ್ಲ ಆ ದಿನವೇ ಘೋಷಣೆ ಮಾಡಿದ್ದೆವು. ಇಂದು ಅದು ಈಡೇರಿದೆ. ಅವರಿಗೆ ನಾವು ತುಂಬು ಹೃದಯದ ಅಭಿನಂದನೆಯನ್ನು ಸಲ್ಲಿಸುತ್ತೇವೆ. ನಮ್ಮ ವಿರೋಧ ಪಕ್ಷದ ನಾಯಕರಿಗೂ ಸಹ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಹಿರಿಯಾರಾದ ನೀವು ಸದನವನ್ನು ಈ ಬಾರಿ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದೀರಿ. ಕಳೆದ ಸಾರಿ ವಿಧಾನಸಭೆಯನ್ನು ನೋಡುತ್ತಿದ್ದಾಗ ಅದೊಂದು ಕುಸ್ತಿಯ ಮಟ್ಟಿಯಾಗುತ್ತಿದೆ ಎಂದು ಬಹಳ ಜನ ಚಿಂತಾಕ್ರಾಂತರಾಗಿದ್ದರು.

ಬಹಳ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಂಥ ಕರ್ನಾಟಕದ ಜನತೆ, ಸಾಹಿತಿಗಳು, ಹಿರಿಯರು, ಕಲ್ಪನೆ ಇಟ್ಟುಕೊಂಡಂಥ ಜನ ಬಹಳ ಆತಂಕಕ್ಕೆ ಒಳಗಾಗಿದ್ದರು. ಅದೆಲ್ಲವನ್ನು ನಿವಾರಣೆ ಮಾಡಿದ್ದೀರಿ. ಆಡಳಿತ ಪಕ್ಷ ವಿರೋಧ ಲಕ್ಷ ಎಲ್ಲಾ ಒಟ್ಟಾಗಿ ಅಭಿವೃದ್ಧಿ ಮಾಡತಕ್ಕಂಥ ದಿಕ್ಕಿನಲ್ಲಿ ಚರ್ಚೆ ಆಗುತ್ತಿದೆ. ಆರೋಗ್ಯಕರ ಚರ್ಚೆ ಆಗತಕ್ಕಂಥದ್ದು ಈ ನಾಡಿನ ಜನತೆಗೆ ಒಂದು ಸಂತೋಷವನ್ನು ತಂದಿದೆ. ಸದ್ಯಕ್ಕೆ ಕಾವೇರಿ ಐತೀರ್ಪಿನ ಬಗ್ಗೆ ಎಲ್ಲಾ ವಿಚಾರ

ವಿನಿಮಯ ಮಾಡಿದ್ದಾರೆ, ಚರ್ಚೆ ಆಗಿದೆ. ನನ್ನ ಅನುಭವದ ಪ್ರಕಾರ ಒಂದು ಸಲಹೆ ಏನೆಂದರೆ, 1966 ರಲ್ಲಿ ಕನ್ನಂಬಾಡಿ ಕಟ್ಟೆಯ ಹಿಂದೆ ಇರತಕ್ಕಂಥ ಜಮೀನನ್ನು ಬರಗಾಲ ಬಂದಾಗ ಉಳುಮೆ ಮಾಡುವುದಕ್ಕೆ ಶುರು ಮಾಡಿದರು. ಬೇಸಿಗೆಯಲ್ಲಿ ಉಳುಮೆ ಮಾಡಿದಾಗ ಒಳ್ಳೆಯ ಬೆಳೆ ಬೆಳೆದರು. ಮಳೆಗಾಲ ಬಂದಾಗ ಮಣ್ಣು ಎಲ್ಲಾ ಕೊಚ್ಚಿಕೊಂಡು ಬಂದು ಕನ್ನಂಬಾಡಿ ಕಟ್ಟೆ 50 ಭಾಗ ತುಂಬಿ ಹೋಗಿದೆ. ಅದನ್ನು ಅವತ್ತೇ protect ಮಾಡಿದ್ದರೆ ಇವತ್ತು ಕನ್ನಂಬಾಡಿ ಕಟ್ಟೆ ಮುಚ್ಚುವಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಇವತ್ತು ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡಿದರೂ ಸಹ ಆ ಹೂಳು ತೆಗೆಯುವುದಕ್ಕೆ ಆಗುವುದಿಲ್ಲ. ಈಗಲಾದರೂ protect ಮಾಡಿ ಹೆಚ್ಚು ನೀರು ಇರತಕ್ಕಂಥದ್ದಕ್ಕೆ ಕಾರ್ಯಕ್ರಮವನ್ನು ರೂಪಿಸಬೇಕು. ಬಜೆಟ್ ನಲ್ಲಿ 500 ಕೋಟಿ ರೂ.ಗಳನ್ನಾದರೂ ಕೂಡ ಹಣ ಇಡಬೇಕೆಂದು ಹೇಳಿ ನಾನು ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ. ಅದರ ಜೊತೆಯಲ್ಲಿ ಇವತ್ತು ಮನೆಗಳ ಬಗ್ಗೆ, ಕಳೆದ ಬಾರಿ ಹನ್ನೆರಡೂವರೆ ಲಕ್ಷ ರೂ.ಗಳನ್ನು ಲಿಮಿಟ್ ಮಾಡಿದ್ದರು. ಆಗಲೇ ಎಂಟೂವರೆ ಲಕ್ಷ ಮನೆಗಳನ್ನು ಕೊಟ್ಟು ಬಿಟ್ಟಿದ್ದಾರೆ. ಎಂಟೂವರೆ ಲಕ್ಷ ಆಶ್ರಯ ಮನೆಗಳಿಗೆ ಆದೇಶವನ್ನು ಕೊಟ್ಟು ಬಿಟ್ಟಿದ್ದಾರೆ. ಆದರೆ ಮನೆ ಕಟ್ಟಿರುವುದು 2 ಲಕ್ಷ ಮಾತ್ರ. ಏಕೆ ಮನೆಗಳನ್ನು ಕಟ್ಟುವುದಕ್ಕೆ ಆಗುತ್ತಿಲ್ಲವೆಂದರೆ, ಅಲ್ಲಿರುವ ಗ್ರಾಮ ಪಂಚಾಯಿತಿಗಳಲ್ಲಿ ಆ PDO ಗಳು ಮನೆಗಳನ್ನು ಆಯ್ಕೆ ಮಾಡಲಿಕ್ಕೆ ಕಂಪ್ಯೂಟರ್ ಫೀಡ್ ಮಾಡಿಲ್ಲ, ಲಾಕ್ ಆಗಿದೆ. ಅಲ್ಲಿ ಮನೆಗಳ ಸಲುವಾಗಿ ಅಡಿಪಾಯ ತೆಗೆದಿದ್ದಾರೆ. ಗೋಡೆ ಹಾಕಿದ್ದಾರೆ, ಮಳೆಗಾಲ ಶುರು ಆಗಿ ಮಳೆ ಬೀಳುತ್ತಿದೆ. ಒಂದು ಕಡೆ ನಿಮ್ಮ ಮನೆ ಇಲ್ಲ, ಅವರು ಮನೆಯನ್ನು ಕಟ್ಟುವಂತಿಲ್ಲ. ಇರತಕ್ಕಂಥ ಹಣವನ್ನು ಆ ಮನೆಯ ಸಲುವಾಗಿ ಹಾಕಿ ಬಿಟ್ಟಿದ್ದಾನೆ. ಅವನ ಪರಿಸ್ಥಿತಿ ಏನು? ಅದಕ್ಕೆ ನಿಯಮವನ್ನು ಸಡಿಲಗೊಳಿಸಬೇಕು ತಕ್ಷಣ ಮನೆ ಕಟ್ಟಲಿಕ್ಕೆ ಸರ್ಕಾರ ಗಮನ ಹರಿಸಬೇಕು. ಕೆರೆ ಹೂಳು ತೆಗೆಯುವುದಕ್ಕೆ ಒಂದೊಂದು ಕ್ಷೇತ್ರಕ್ಕೆ 5 ಕೋಟಿ ರೂ.ಗಳನ್ನು ಕೊಟ್ಟಿದ್ದರು. ಆ ಹಣ ವಾಪಸ್ಸು ಪಡೆದಿದ್ದಾರೆ. ಯಾರು ಒಂದು–ಎರಡು ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ, ಅವರು ಉಳಿದ ಹಣವನ್ನು ವಾಪಸ್ಸು ಪಡೆದಿದ್ದಾರೆ. ಕಳೆದ ಬಾರಿ ಜೂನ್ ತಿಂಗಳಲ್ಲಿ ಏನು ಮಳೆ ಬಂದಿತ್ತು, ಅದಕ್ಕಿಂತ ಕಡಿಮೆ ಮಳೆ ಬಂದಿದೆ. ಇನ್ನೂ ಬರಗಾಲ ಇದೆ. ಮಳೆ ಬರುತ್ತದೆ ಎನ್ನುವ ಆಶಯವನ್ನು ಹೊಂದಿದ್ದೇವೆ.

ಇನ್ನೂ ಮಳೆ ಬಂದಿಲ್ಲ. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿಯೇ ಇದ್ದಾರೆ. ಅವರ ಮೇಲೆ ನಮಗೆ ನಂಬಿಕೆ ಇದೆ. ಅಬ್ದುಲ್ ನಜೀರ್ ಸಾಹೇಬರು, ನೀವು ಮತ್ತು ಸಿದ್ದರಾಮಯ್ಯನವರು ಮತು ಕೆ.ಹೆಚ್.ಪಾಟೀಲ್‌ರವರೂ ಕೂಡ ಇದ್ದರು. ಅವತ್ತು ಅಧಿಕಾರ ವೀಕೇಂದ್ರಿಕರಣ ಮಾಡಿ West Bengal ಗೆ ಹೋಗಿ ಅಧ್ಯಯನ ಮಾಡಿ two-tier system ತಂದಿದ್ದರು. ಅದನ್ನು ತೆಗೆದು Three-tier system ಅನ್ನು ಮಣಿಶಂಕರ್ ಅಯ್ಯರ್‌ರವರು ಮತ್ತು ರಾಜೀವ್ ಗಾಂಧಿಯವರು ತಂದರು. ಆದ್ದರಿಂದ ಯಾವುದಕ್ಕೂ ಅಧಿಕಾರ ಇಲ್ಲ. ಅವರ ಪರಿಸ್ಥಿತಿ ಚಿಂತಾಜನಕ. Three-tier system ಅನ್ನು ತೆಗೆಯಬೇಕು. Three-tier system ಉಳಿಯಬೇಕು. ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮಲ್ಲಿ 235 ಗ್ರಾಮ ಪಂಚಾಯಿತಿಗಳು ಇವೆ. ನಮ್ಮಲ್ಲಿ 91 PDO ಗಳು ಮಾತ್ರ ಇದ್ದಾರೆ. Software ದಿಂದ ಬಂದರು, Lecturer ಆಗಿ ಇದ್ದಂಥವರು ಬಂದರು, ಕೆಲಸ ಬಿಟ್ಟು ಹೋದರು. ಕೆಲಸ ಮಾಡುತ್ತಿಲ್ಲ, ಸಾಯುತ್ತಿದ್ದಾರೆ. 235 ಗ್ರಾಮ ಪಂಚಾಯಿತಿಗಳಲ್ಲಿ 91 PDO ಗಳು ಇರುವುದು. ಇನ್ನು 144 PDO ಗಳ ಹುದ್ದೆಗಳು ಖಾಲಿ ಇವೆ. ಅಲ್ಲಿರುವ Secretary ಗಳಿಗೆ ಎರಡು–ಮೂರು ಗ್ರಾಮ ಪಂಚಾಯಿತಿಗಳಿಗೆ ಹಾಕಿದ್ದಾರೆ. ಗ್ರಾಮ ನೈರ್ಮಲ್ಯ ಇಲ್ಲ. ಡೆಂಗ್ಯೂ ಜ್ವರ ಬರುತ್ತಿದೆ. ನೈರ್ಮಲ್ಯ ಕಾಪಾಡುವುದಕ್ಕೆ ಆಗುತ್ತಿಲ್ಲ. ಇದೆಲ್ಲಾ ಯಾರು ಮಾಡಬೇಕು. ಪಂಚಾಯಿತಿಗಳಲ್ಲಿ ಅಧಿಕಾರಿಗಳು ಇಲ್ಲ. ಆ ಕಡೆ ಗಮನವನ್ನು ಹರಿಸದೆ ಬಜೆಟ್‌ನಲ್ಲಿ ನೀವು 5000 ಕೋಟಿ ರೂ.ಗಳನ್ನು ಕೊಟ್ಟರೂ 10,000 ಕೋಟಿ ರೂ.ಗಳನ್ನು ಕೊಟ್ಟರೆ ಏನು? ಕಟ್ಟ ಕಡೆಯ ಆ ಗ್ರಾಮದ ಅಭಿವೃದ್ಧಿ ನೈರ್ಮಲ್ಯ ನೀವು ಮಾಡದೇ ಹೋದರೆ ಅದನ್ನು ಬಗೆಹರಿಸದೆ ಹೋದರೆ ನಿವು ಕೊಟ್ಟಿರತಕ್ಕಂಥ ಯೋಜನೆಗಳು ಒಳ್ಳೆಯದಾಗಬೇಕು. ನಿಮ್ಮ ಯೋಜನೆಗಳು ಒಳ್ಳೆಯದಾಗಿರುತ್ತದೆ. ಒಂದು ರೂ.ಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಟ್ಟಿರುತ್ತೀರಿ. ಕಾರ್ಡುಗಳನ್ನು ಕೊಡುವುದಕ್ಕೆ ಕಂಪ್ಯೂಟರ್‌ನಲ್ಲಿ ನಮ್ಮ Food Minister ನೋಡುತ್ತಿಲ್ಲ. ಒಂದೊಂದು ಕ್ಷೇತ್ರಕ್ಕೆ ಒಬ್ಬೊಬ್ಬರನ್ನು ಹಾಕಿದ್ದಾರೆ. ಒಂದೊಂದು ಪಂಚಾಯಿತಿಗೆ ಒಬ್ಬೊಬ್ಬರನ್ನು ಹಾಕಿದ್ದಾರೆ. ಅವರು ಬರೀ ಎರಡು–ಮೂರು ಕಾರ್ಡುಗಳನ್ನು ಪ್ರಿಂಟ್ ಮಾಡುತ್ತಿದ್ದಾರೆ. ಅವರಿಗೆ ಇನ್ನು ಮೂರು ತಿಂಗಳಾದರೂ ಅದನ್ನು ಕಂಪ್ಲೀಟ್

ಮಾಡುವುದಕ್ಕಾಗುವುದಿಲ್ಲ. ಜುಲೈ ತಿಂಗಳಿಗೆ ಕೊಡುತ್ತೇನೆಂದು ಹೇಳಿದ್ದೀರಿ. ಇನ್ನೂ 6 ತಿಂಗಳಾದರೂ ಕೊಡುವುದಕ್ಕಾಗುವುದಿಲ್ಲ. ಕಾರ್ಡು ಕಂಪ್ಲೀಟ್ ಮಾಡುವುದಕ್ಕಾಗುವುದಿಲ್ಲ. ಅದನ್ನು ಯಾರೂ ನೋಡುತ್ತಿಲ್ಲ. ಒಂದು ಕಂಪ್ಯೂಟರ್ ಮತ್ತು ಒಬ್ಬರು ಅಧಿಕಾರ ಇದ್ದಾರೆ. ಒಂದು ದಿವಸಕ್ಕೆ ಅವನು ಫೀಡ್ ಮಾಡುವುದು ಮೂರು ಕಾರ್ಡು ಮಾತ್ರ, ಅವರಿಗೆ ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕು. ಇಷ್ಟು ದಿವಸದಲ್ಲಿ ಆಗಬೇಕೆಂದು ಲಿಮಿಟ್ ಮಾಡಿ ಜವಾಬ್ದಾರಿ ಫಿಕ್ಸ್ ಮಾಡಬೇಕು. ಆ ರೀತಿ ಸರ್ಕಾರ ಏನು ಕೊಟ್ಟಿದ್ದೀರಿ ಅದನ್ನು ಕಾರ್ಯಗತಗೊಳಿಸುವುದಕ್ಕೆ ಜರೂರಾಗಿ ಅಭಿವೃದ್ಧಿಗೊಳಿಸುವುದಕ್ಕೆ ತಾವು ಮಾರ್ಗದರ್ಶನ ಮಾಡುತ್ತಿದ್ದೀರಿ. ಸಭೆ ಉತ್ತಮವಾಗಿ ನಡೆಯುತ್ತಿದೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಒಟ್ಟಾಗಿ ಕೆಲಸ ಮಾಡುತ್ತಿದೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿ ಆಗಲಿ. ತಮಗೆ ಅಭಿನಂದನೆಗಳು, ನಮಸ್ಕಾರಗಳು.

ಶ್ರೀ ಸಿ.ಎನ್.ಬಾಲಕೃಷ್ಣ (ಶ್ರವಣಬೆಳಗೋಳ) : ಮಾನ್ಯ ಅಧ್ಯಕ್ಷರೆ, ಪ್ರಾಪಂಚಿಕ ಸತ್ಯಾಸತ್ಯತೆಯನ್ನು ಎತ್ತಿ ಹಿಡಿದಂಥ ಮತ್ತು ತ್ಯಾಗ ಮೂರ್ತಿಯಾದಂಥ ಭಗವಾನ್ ಬಾಹುಬಲಿಯ ಪುಣ್ಯಕ್ಷೇತ್ರವಾದಂಥ ಶ್ರವಣಬೆಳಗೋಳ ಕ್ಷೇತ್ರದಿಂದ ನಾನು ಆಯ್ಕೆಯಾಗಿ ಬಂದಿದ್ದೇನೆ. ಈ ದಿವಸ ಸದನದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಇವತ್ತು ಹಿಂದುಳಿದ ವರ್ಗದ ಒಬ್ಬ ನಾಯಕರಾಗಿ ಈ ರಾಜ್ಯದ ಮುಖ್ಯಮಂತ್ರಿಗಳು ಆಗಿರತಕ್ಕಂಥದ್ದು ಸ್ವಾಗತಾರ್ಹವಾದಂಥ ವಿಚಾರ. ಈ ರಾಜ್ಯದ ಉತ್ತಮವಾ–ದಂಥ ಆಡಳಿತಕ್ಕೆ ನಮ್ಮ ನಾಯಕರಾದಂಥ ಕುಮಾರಸ್ವಾಮಿಯವರ ನೇತೃತ್ವದಲ್ಲಿ ನಮ್ಮೆಲ್ಲರ ಪೂರ್ಣ ಪ್ರಮಾಣದ ಸಹಕಾರ ಇರುತ್ತದೆ ಎನ್ನತಕ್ಕಂಥ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಪ್ರಸ್ತಾಪಿಸುತ್ತಾ, ನಮ್ಮ ದೇಶ ಕೃಷಿ ಪ್ರಧಾನವಾದಂಥ ದೇಶವಾಗಿದೆ. ರೈತ ಈ ದೇಶದ ಬೆನ್ನೆಲುಬು. ಆದರೆ ಉದಾಹರಣೆಗೆ ನಮ್ಮ ಕ್ಷೇತ್ರದಲ್ಲಿ ಕೃಷಿ ಅಧಿಕಾರಿಗಳು ಮತ್ತು ಸಹಾಕರ ಕೃಷಿ ಅಧಿಕಾರಿಗಳು 18 ಜನ ಕರ್ತವ್ಯ ನಿರ್ವಹಿಸತಕ್ಕಂಥ ಜಾಗದಲ್ಲಿ ಕೇವಲ 5 ಜನ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಹಿಂದೆ 43 ಜನ ಗ್ರಾಮ ಸೇವಕರು ಕೆಲಸವನ್ನು ಮಾಡಿ ರೈತರಿಗೆ ಪೂರಕವಾದ ಸಹಕಾರವನ್ನು ಮಾಡುತ್ತಿದ್ದರು. ಅವರು ನಿವೃತ್ತಿಯಾದ ಬಳಿಕ ಇವತ್ತು 43 ಹುದ್ದೆಗಳು ಖಾಲಿ ಆಗಿವೆ. ಇದು ಕೇವಲ

ಒಂದು ಕ್ಷೇತ್ರಕ್ಕೆ ಸೀಮಿತವಾದಂಥದ್ದು ಅಲ್ಲ. ಇದು ಇಡೀ ರಾಜ್ಯಕ್ಕೆ ಸೀಮಿತವಾದಂಥ ವಿಚಾರ. ದಯಮಾಡಿ ಮುಂದಿನ ದಿನಗಳಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡುವುದರ ಮೂಲಕ ಕೃಷಿ ಇಲಾಖೆಯ ಒಂದು ಬಲವರ್ಧನೆಗೆ ಈ ಸರ್ಕಾರ ಸಹಕಾರವನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಮನವಿಯನ್ನು ಮಾಡುತ್ತಿದ್ದೇನೆ, ಪಶು ಸಂಗೋಪನೆ ಇಲಾಖೆಗೆ ನೀಡತಕ್ಕಂಥ ಅನುದಾನ ಇವತ್ತು ಗ್ರಾಮಾಂತರ ಪ್ರದೇಶ ಜಾನುವಾರುಗಳ ಒಂದು ಸಂರಕ್ಷಣೆಗೆ ಒಂದು ಚಿಕಿತ್ಸೆಯನ್ನು ಒದಗಿಸುವುದಕ್ಕೆ ಕೂಡ ಸಹಕಾರ ಆಗುತ್ತಿಲ್ಲ. ಅದಕ್ಕಾಗಿ ಹೆಚ್ಚಿನ ಒಂದು ಅನುದಾನಕ್ಕೆ ಈ ಸರ್ಕಾರ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಮನವಿಯನ್ನು ಮಾಡುತ್ತಿದ್ದೇನೆ. ಆಶ್ರಯ ಮನೆಗಳ ವಿಚಾರದಲ್ಲಿ ಕಳೆದ 5 ವರ್ಷಗಳ ಅವಧಿಯಲ್ಲಿ ಕಠಿಣವಾದಂಥ ನಿಯಮಗಳು ಇರುವುರಿಂದ ಕೇವಲ 30% ಪ್ರಗತಿ ಆಗಿದೆ. ವಸತಿ ನಿಗಮದಿಂದ ಈ ಒಂದು ನಿಯಮಗಳನ್ನು ಸಡಿಲಗೊಳಿಸಿ ಬಡವರು ಅತಿ ಜರೂರಾಗಿ ಮನೆಗಳನ್ನು ನಿರ್ಮಾಣ ಮಾಡತಕ್ಕಂಥದ್ದಕ್ಕೆ ಅವಕಾಶ ಮಾಡಲಿಕ್ಕೆ ಸರ್ಕಾರ ಕೊಡಬೇಕೆಂದು ಒಂದು ಮನವಿಯನ್ನು ಮಾಡುತ್ತಿದ್ದೇನೆ. ಚಾಮುಂಡೇಶ್ವರಿ ವಿದ್ಯುತ್ ಕಂಪನಿಯ ಅಡಿಯಲ್ಲಿ ನಮ್ಮ ಭಾಗದ ಕ್ಷೇತ್ರಗಳು ಬರುತ್ತವೆ. ಇವತ್ತು ಚನ್ನರಾಯಪಟ್ಟಣ ಒಂದು ಡಿವಿಷನ್‌ಗೆ 200 ವಿದ್ಯುತ್ ಪರಿವರ್ತಕಗಳು ಸರಬರಾಜು ಆಗಬೇಕಾಗಿದೆ. ಇವತ್ತು ವಿದ್ಯುತ್ ಇಲಾಖೆಯಲ್ಲಿ ತುಂಬಾ ಭ್ರಷ್ಟಾಚಾರ ಇದೆ. ಇವತ್ತು ಒಂದು ವಿದ್ಯುತ್ ಪರಿವರ್ತಕವನ್ನು ರೈತರುಗಳು ಪಡೆಯಬೇಕಾದರೆ 10 ರಿಂದ 15 ಸಾವಿರ ರೂ.ಗಳನ್ನು ನೀಡತಕ್ಕಂಥ ಒಂದು ಸಂದರ್ಭ ಇದೆ. ಅದಕ್ಕೆ ಕಡಿವಾಣವನ್ನು ಹಾಕಿ ರೈತರ ಹಿತದೃಷ್ಟಿಯಿಂದ ಎಲ್ಲಾ ಮೆಟೀರಿಯಲ್ಸ್‌ಗಳನ್ನು ಸರಬರಾಜು ಮಾಡತಕ್ಕಂಥದ್ದಕ್ಕೆ ಅನುವು ಮಾಡಿಕೊಡಬೇಕು ಎನ್ನುವಂಥ ಮನವಿಯನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಈ ಒಂದು ಸದನದಲ್ಲಿ ಸಹಕಾರ ಸಚಿವರು ಇಲ್ಲಿ ಉಪಸ್ಥಿತರಿರುತ್ತಾರೆ. ಈ ಹಿಂದೆ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರು ಸರ್ಕಾರ 25,000 ರೂ.ಗಳವರೆಗೆ ಸಲವನ್ನು ಮನ್ನಾ ಮಾಡಿದರು. ತದನಂತರ ಮಾನ್ಯ ಜಗದೀಶ್ ಶೆಟ್ಟರ್‌ರವರ ಒಂದು ಸರ್ಕಾರ 25,000 ರೂ.ಗಳವರೆಗೆ ಸಾಲವನ್ನು ಮನ್ನಾ ಮಾಡಿದರು. ಅದರಲ್ಲಿ ಜುಲೈ 25 ರಿಂದ 31 ರೊಳಗೆ 5 ದಿವಸಗಳಲ್ಲಿ ಸಾಲವನ್ನು ಪಡೆದಿರತಕ್ಕಂಥ ರೈತರಿಗೆ ಈ ಒಂದು ಮನ್ನಾ

ಯೋಜನೆಯಲ್ಲಿ ಅವಕಾಶವಾಗಿಲ್ಲ. ನಾನೊಬ್ಬ ಶಾಸಕನಾಗಿ ಮತ್ತು ಸಹಕಾರಿಯಾಗಿ ಒಂದು ಉದಾಹರಣೆ ಹೇಳುತ್ತೇನೆ. ಹಾಸನ ಜಿಲ್ಲೆಯಲ್ಲಿ 10,000 ಜನ ರೈತರು ಇದರಿಂದ ವಂಚಿತರಾಗುತ್ತಾರೆ. ಇಡೀ ರಾಜ್ಯಾದ್ಯಾಂತ ಆ 5 ದಿವಸಗಳ ಒಂದು ಸಹಕಾರ ಮಾಡಿದರೆ ಅದನ್ನು ಸರ್ಕಾರ ಈ ಒಂದು ಸಾಲ ಮನ್ನಾ ಯೋಜನೆಯಲ್ಲಿ ಆ 5 ದಿವಸಗಳನ್ನು ಸೇರಿಸಿಕೊಡರೆ ಈ ರಾಜ್ಯದ ಎಲ್ಲಾ ರೈತರಿಗೂ ಕೂಡ 25,000 ರೂ.ಗಳ ಒಂದು ಸಾಲ ಮನ್ನಾದ ಅವಕಾಶ ಸಿಗುತ್ತದೆ. ಆದ್ದರಿಂದ ಸರ್ಕಾರದ ಮೂಲಕ ಈ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ. ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : 5 ನಿಮಿಷ ಆಗಿ ಹೋಯಿತು. ಬೇಗ ಮುಗಿಸಿ ಬಿಡಿ.

ಶ್ರೀ ಸಿ.ಎನ್.ಬಾಲಕೃಷ್ಣ : conclude ಮಾಡಿ ಬಿಡುತ್ತೇನೆ. ಇವತ್ತು ಹಾಸನ ಮತ್ತು ಶ್ರವಣಬೆಳಗೊಳ ಕ್ಷೇತ್ರದಿಂದ ನಾವೇನು ಆಯ್ಕೆಯಾಗಿ ಬಂದಿದ್ದೇವೆ, ನಮ್ಮ ಮೂಲಕ ಹೇಮಾವತಿ ನದಿ ನೀರು ತುಮಕೂರು ಮತ್ತು ಮಂಡ್ಯ ಜಿಲ್ಲೆಗೆ ಬಾಗೂರು ಸುರಂಗದ ಮೂಲಕ ಹೋಗುತ್ತಿದೆ. ಆದರೆ ನಮ್ಮ ಭಾಗದ ರೈತರು ತುಂಬಾ ಚೆನ್ನಾಗಿದ್ದಾರೆಂದು ಜನರ ಭಾವನೆ ಆಗಿದೆ. ನನ್ನ ಸ್ವಂತ ಕ್ಷೇತ್ರದಲ್ಲಿ 70 ಭಾಗ ರೈತರು ಸಂಕಷ್ಟದಲ್ಲಿದ್ದಾರೆ. ಅಂತರ್ಜಲ ತುಂಬಾ ಕುಸಿದಿದೆ. ಮುಂದಿನ ದಿವಸಗಳಲ್ಲಿ ಬಾಗೂರು-ನವಿಲೆ ಏತ ನೀರಾವರಿಯ ಒಂದು ಬಲವರ್ಧನೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಇವತ್ತು ಸರ್ಕಾರದ ಮುಂದೆ ಇರತಕ್ಕಂಥ ಹಿರಿಸಾವೆ-ಜುಟ್ಟನಹಳ್ಳಿ ಏತ ನೀರಾವರಿ ಯೋಜನೆಗೆ ಈಗಾಗಲೇ 2 ಕೋಟಿ ಹಣ ಮಂಜೂರಾತಿ ಆಗಿದೆ. ಆ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕಂಥದ್ದಕ್ಕೆ ಸರ್ಕಾರ ಅವಕಾಶವನ್ನು ಮಾಡಿಕೊಡಬೇಕು. ಅದೇರೀತಿ ಕಲ್ಲೆಸೋಮನಹಳ್ಳಿ ಏತ ನೀರಾವರಿ ಯೋಜನೆ ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಆ ಒಂದು ಯೋಜನೆಯನ್ನು ಪೂರ್ಣಗೊಳಿಸತಕ್ಕಂಥದ್ದಕ್ಕೆ ಸರ್ಕಾರ ಅವಕಾಶವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಮನವಿಯನ್ನು ಮಾಡುತ್ತೇನೆ. ಅಲ್ಪಸಂಖ್ಯಾತರ ನಿಗಮಕ್ಕೆ ಹೆಚ್ಚು ಅನುದಾವನ್ನು ಕೊಟ್ಟು ಸ್ವಯಂ ಉದ್ಯೋಗ ಯೋಜನೆಯಲ್ಲಿ ಅವಕಾಶವನ್ನು ಮಾಡಿಕೊಡಬೇಕೆಂದು ಮನವಿಯನ್ನು ಮಾಡಿ ಈ ಒಂದು ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲು

ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ಮತ್ತೊಮ್ಮೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎ.ಮೊಹಿದ್ದೀನ್ ಬಾವಾ (ಮಂಗಳೂರು ನಗರ (ಉತ್ತರ)): ರಾಜ್ಯಪಾಲರ ವಂದನಾ ನಿರ್ಣಯ ಭಾಷಣದ ಮೇಲೆ ಮಾತನಾಡಲು ಹೊಸ ಸದಸ್ಯರಿಗೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ನಾನು ಎಲ್ಲಾ ಹೊಸ ಸದಸ್ಯರ ಪರವಾಗಿ ವಿಶೇಷವಾಗಿ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸಲು ಇಚ್ಛಿಸುತ್ತೇನೆ. ಏಕೆಂದರೆ ಬಹುಶ್ ಹಿರಿಯ ಸದಸ್ಯರುಗಳು ಹಾಗೂ ನಾಯಕರುಗಳು ದಿನವಿಡೀ ಮಾತನಾಡುವಾಗ ಮುಂದಿನ ದಿನಗಳಲ್ಲಿ ಹೊಸ ಸದಸ್ಯರಿಗೂ ಒಂದು ಐದು ನಿಮಿಷ ಮಾತನಾಡಲು ಅವಕಾಶ ಖಂಡಿತ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಮುಖ್ಯವಾಗಿ 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎನ್ನುವ ಗಾದೆಗನುಗುಣವಾಗಿ ಇವತ್ತು ನಮ್ಮ ಸಿದ್ದರಾಮಯ್ಯನವರು ಅಧಿಕಾರ ತೆಗೆದುಕೊಂಡ ತಕ್ಷಣ ಒಂದು ಒಳ್ಳೆಯ ಸಂಕೇತವನ್ನು ಈ ಸಂದರ್ಭದಲ್ಲಿ ನೀಡಿದಂತಹ ಕರ್ನಾಟಕ ರಾಜ್ಯದ ಜನತೆಗೆ ನೀಡುತ್ತಿರುವ ಸಂದರ್ಭದಲ್ಲಿ ಬಹುಶಃ ಪ್ರಮುಖ ಪ್ರತಿಪಕ್ಷವಾದ ಜೆ.ಡಿ.(ಎಸ್)ನವರು ಅವರ ಗುಣಗಾನಗಳನ್ನು ಮಾಡುತ್ತಿರುವ ಸ್ಥಿತಿಯನ್ನು ಕಂಡು ಬಹಳ ಹೆಮ್ಮೆಯಿಂದ ಆಡಳಿತ ಪಕ್ಷದ ನಾವುಗಳು ಬೀಗುತ್ತಿದ್ದೇವೆ. ಇವತ್ತು ನಮ್ಮವರು ಎಂದು ಹೇಳಿ ವೋಟಿನ ಸಂದರ್ಭದಲ್ಲಿ ಅವರನ್ನು ದೂರುತ್ತಿದ್ದವರೂ ಸಮೇತ, ನಮ್ಮವರು ಎಂದು ಗುಣಗಾನವನ್ನು ಮಾಡುತ್ತಿರುವಾಗ ಮುಂದಿನ ದಿನಗಳಲ್ಲಿ ನಮ್ಮನ್ನು ಹೊಡೆಯುವುದು ಬಿಡಿ, ಅವರು ನಮ್ಮೊಂದಿಗೆ ಸೇರುವಂತಹ ಎಲ್ಲಾ ಸೂಚನೆಗಳು ಈ ಸಂದರ್ಭದಲ್ಲಿ ಕಾಣಿಸುತ್ತದೆ. ಮುಖ್ಯವಾಗಿ ಕರಾವಳಿಯ ಸ್ವಲ್ಪ ಸಮಸ್ಯೆಗಳನ್ನು ರಾಜ್ಯಪಾಲರ ಭಾಷಣದ ಅನುಸೂಚಿಯಲ್ಲಿ ಬಂದಂತಹ ಮಾತುಗಳಲ್ಲಿ ನಾನು ಮುಖ್ಯವಾಗಿ ಹೇಳುವುದೇನೆಂದರೆ, ಕನ್ನಡ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತಿರುವ ಹಿನ್ನೆಲೆಯಲ್ಲಿ ಶಾಸ್ತ್ರೀಯ ಭಾಷಾ ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡುವ ಕುರಿತು ನಮ್ಮ ಸರ್ಕಾರದ ಮುಖ್ಯಮಂತ್ರಿಯವರು ರಾಜ್ಯಪಾಲರ ಭಾಷಣದ ಮೂಲಕ ಪ್ರಸ್ತಾಪಿಸಿದ್ದಾರೆ. ಆ ಒಂದು ಸಂಶೋಧನಾ ಕೇಂದ್ರವನ್ನು ತಾವುಗಳು ಅಧ್ಯಕ್ಷರು ಮುಖ್ಯಮಂತ್ರಿಗಳಿಗೆ ತಿಳಿಸಿ ಮಂಗಳೂರಿನಲ್ಲಿ ಸ್ಥಾಪನೆ ಮಾಡಿಸುವಂತಹ ಕೆಲಸಕ್ಕೆ ತಾವು ಕೈ ಹಾಕಬೇಕು. ಏಕೆಂದರೆ 'ಮಂಗಳೂರು

ಸಮಾಚಾರ' ಎಂದು ಪ್ರಪ್ರಥಮ ಕನ್ನಡ ದಿನಪತ್ರಿಕೆ ಮಂಗಳೂರಿನಲ್ಲಿ ಪ್ರಾರಂಭವಾದದ್ದು ಎಂದು ತಮಗೆ ಗೊತ್ತಿರಬಹುದು. ಬಹುಶಃ ಇವತ್ತು ಕನ್ನಡ ಅನುವಾದ ಮಾಡುವಂತಹ dictionary ಕಂಡುಹಿಡಿದಿದ್ದರೆ ಅದು ಮಂಗಳೂರಿನಲ್ಲಿ ಆಗಿದಂತಹ ಕಾರ್ಯ ಎನ್ನುವ ಮಾತನ್ನು ನೆನಪಿಟ್ಟುಕೊಳ್ಳಬೇಕು. ಬಹುಶಃ ಮಂಗಳೂರಿನಲ್ಲಿ ಅನೇಕ ಸಂಶೋಧನಾ ಕೇಂದ್ರಗಳಿವೆ ಆ ಕೇಂದ್ರವನ್ನು ಮಂಗಳೂರಿನಲ್ಲಿ ಸ್ಥಾಪಿಸಬೇಕೆಂದು ಕೇಳಿಕೊಳ್ಳುತ್ತಾ, ಇನ್ನೊಂದು ಕಾರ್ಯಕ್ರಮ ಏನೆಂದರೆ ನಮ್ಮ ಸರ್ಕಾರವು ಯಾವ ರೀತಿಯಲ್ಲಿ ಮಹಿಳೆಯರ ಮತ್ತು ಮಕ್ಕಳ ಲೈಗಿಂಕ ವಿಷಯದ ಬಗ್ಗೆ ಬಹಳ ಕಾಳಜಿ ವಹಿಸಿದೆ ಏಕೆಂದರೆ 2013ರ ಕೇಂದ್ರ ಕಾನೂನನ್ನು ಬಹಳ ಒಳ್ಳೆಯ ರೀತಿಯಲ್ಲಿ ಅನುಷ್ಠಾನ ಮಾಡುವ ಭರವಸೆಯನ್ನು ನೀಡಿದೆ. ಆ ಭರವಸೆ ನಿಜಕ್ಕೂ ಒಂದು ಹೆಮ್ಮೆಯ ಭರವಸೆ. ಕಳೆದ ಬಾರಿ ನಾವು ನೋಡಿರಬಹುದು, ಬಿ.ಜೆ.ಪಿ. ಸರ್ಕಾರದಲ್ಲಿ ಅವ್ಯಾಹತವಾಗಿ ಈ ಸದನದಲ್ಲಿಯೇ ನಡೆದಿದೆ. ಅಂತಹ ಕಳಂಕ ತಂದಿರುವಂತಹ ಕರ್ನಾಟಕದಲ್ಲಿ ತೊಳೆದುಕೊಡುವಂತಹ ಕೆಲಸ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ನಮಗೆಲ್ಲರಿಗೂ ಗೌರವ ಬಂದಿದೆ, ಮಹಿಳೆಯರಿಗೂ ಮತ್ತು ಮಕ್ಕಳಿಗೂ ಒಂದು ಗೌರವ ಬಂದಿದೆ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಇನ್ನೊಂದು ಮಾತುಹೇಳಬೇಕಾಗಿದೆ ಮಾನ್ಯ ಅಧ್ಯಕ್ಷರೆ. ಇವತ್ತು ಮಕ್ಕಳಿಗೆ ಯಾವ ರೀತಿಯಲ್ಲಿ ಸೈಬರ್‌ನಲ್ಲಿ blue film ಸಿಗುವಂಥದ್ದು ಇರುವುದರಿಂದ ತಾವುಗಳು ಲೈಂಗಿಕ ಕಾಯ್ದೆಗೆ ಒಂದು ಮುಖ್ಯವಾದ ಕಾನೂನನ್ನು ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಮುಖ್ಯವಾದ ಕರಾವಳಿ ಭಾಗದಲ್ಲಿ ಒಂದು ಸಮಸ್ಯೆ ಇದೆ. ಕಾಂಗ್ರೆಸ್ ಪಕ್ಷದ ಸಭೆಯಲ್ಲಿಯೂ ನಾನು ಹೇಳಿದ್ದೆ. ಕರಾವಳಿ ಭಾಗದಲ್ಲಿ ಇವತ್ತು ವಿದೇಶದಿಂದ ಸೌದಿ ಅರೇಬಿಯಾದಿಂದ 'ನಿಖಾಕತ್ ಕಾಯ್ದೆ'ಗೆ ಒಳಗಾಗಿ ವಿದೇಶದಲ್ಲಿ ದುಡಿಯುತ್ತಿರುವವರು, ಅದು ಕರಾವಿ ಭಾಗದಲ್ಲಿ ಅಲ್ಲ, ಬೆಂಗಳೂರಿನ ಹಾಗೂ ಕರ್ನಾಟಕದ ಹಲವಾರು ಜನತೆ ಇವತ್ತು ಕೆಲಸ ಬಿಟ್ಟು ಸೌದಿ ಅರೇಬಿಯಾದಿಂದ ಬರುವಂತಹ ಪರಿಸ್ಥಿತಿ ಆಗಿದೆ. ಕೆಲಸ ಬಿಟ್ಟು ಬರುವಂತಹ ನಿರ್ಗತಿಕರು ಇವತ್ತು ಎರಡು ಏರ್‌ಪೋರ್ಟ್‌ಗಳಿಂದ ಬರುತ್ತಾರೆ. ಒಂದು ಮಂಗಳೂರು ಏರ್‌ಪೋರ್ಟ್ ಹಾಗೂ ಇನ್ನೊಂದು ಬೆಂಗಳೂರು ಏರ್‌ಪೋರ್ಟ್‌ನಿಂದ ಬರುತ್ತಾರೆ. ಅಲ್ಲಿ officer ಅನ್ನು ನೇಮಕ ಮಾಡಿ

ಯಾರೆಲ್ಲಾ ಕೆಲಸ ಬಿಟ್ಟು ಬರುತ್ತಾರೆ ಅವರನ್ನು ಗುರುತಿಸಿಕೊಂಡು ಮುಂದಿನ ದಿನಗಳಲ್ಲಿ ಅವರಿಗೆ ಒಂದು ಕೆಲಸ ಅಥವಾ industry ಮಾಡುವವರಿದ್ದರೆ ಅವರಿಗೆ support ಮಾಡುವಂತಹ ಕೆಲಸ ಮಾಡದಿದ್ದರೆ ನಾವು ಅವರಿಗೆ ಬಹಳ ಅಗೌರವ ಮಾಡಿದಂತಾಗುತ್ತದೆ. ಅವರು ನಮ್ಮ ರಾಷ್ಟ್ರಕ್ಕೆ ಬಹಳಷ್ಟು ಆ ಪ್ರದೇಶದಿಂದ ವರಮಾನಗಳನ್ನು ಗಳಿಸಿದರೂ ನಮಗೆ ಈ ಕರ್ನಾಟಕಕ್ಕಾಗಲಿ, ಭಾರತ ದೇಶಕ್ಕಾಗಲಿ, ಅವರು ಬಹಳಷ್ಟು ಅನುಕೂಲ ತರುವಂತಹ ಕೆಲಸಗಳನ್ನು ಮಾಡಿದರು. ಅವರನ್ನು ನಾವು ನೋಡುವಂತಹ ಕೆಲಸ ಮಾಡಬೇಕೆಂದು ಅಧ್ಯಕ್ಷರ ಮೂಲಕ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್.ಪಾಟೀಲ್ (ಅಳಂದ) : ಮಾನ್ಯ ಅಧ್ಯಕ್ಷರೆ,. . .

(ಗೊಂದಲ)

ಅಧ್ಯಕ್ಷರು : ತಾವು ಮಾತನಾಡುತ್ತೀರಾ?

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬಹಳಷ್ಟು ಸದಸ್ಯರು ಸೀಟಿನಲ್ಲಿ ಇಲ್ಲ.

(ಗೊಂದಲ)

ಅಧ್ಯಕ್ಷರು : ಇಲ್ಲ, ಇಲ್ಲ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ದಯಮಾಡಿ ನನ್ನ ಮಾತನ್ನು ಕೇಳಿ. ನಮ್ಮ ಪಕ್ಷದಿಂದ ಒಬ್ಬರೇ ಮಾತನಾಡಿದ್ದಾರೆ. ನಾನೂ ಮಾತನಾಡಬೇಕು. ನೀವು ಐದು ನಿಮಿಷದಲ್ಲಿ ಮಾತನಾಡಿ ಮುಗಿಸಿ ಎಂದು ಹೇಳುತ್ತಿದ್ದೀರಿ, ಅದು ಸಾಧ್ಯವಿಲ್ಲ. ಇವತ್ತು ಏನು attendance ಕೊಟ್ಟಿದ್ದೇವೆ ಕೋರಂಗೆ ಮತ್ತು ಸಭೆ ನಡೆಸುವುದಕ್ಕೆ ನಾಳೆ ನಮಗೆಲ್ಲಾ ಗ್ರೇಸ್ ಮಾರ್ಕ್ಸ್ ಕೊಟ್ಟು, ಬಂದಂಥವರಿಗೆ ಮತ್ತೆ ನಾಳೆ ಬೆಳಿಗ್ಗೆ ಅವಕಾಶ ಮಾಡಿಕೊಡಿ. ನನ್ನದೊಂದು ವಿನಂತಿ ಇದೆ. ತಾವು ಇಷ್ಟು ದಿನ liberal ಆಗಿದ್ದೀರಿ, ಹೀಗಾದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಕ್ಷಮಿಸಿ. ಇವತ್ತು ಚರ್ಚೆ ಮುಕ್ತಾಯವಾಗಲೇಬೇಕು.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಇಲ್ಲ ಸರ್ ಆಗುವುದಿಲ್ಲ. ಈಗ ಮಾತನಾಡುವುದನ್ನು ತಾವು ನೋಡುತ್ತಿದ್ದೀರಿ. ರಿಪೋರ್ಟರ್ಸ್ ನೋಡುತ್ತಿದ್ದಾರೆ ಮತ್ತೆ ಬೇರೆ ಯಾರೂ ಇಲ್ಲ. ಮಾತು ಕೇಳುವುದಕ್ಕೆ ಯಾರಿಗೂ seriousness ಇಲ್ಲ. ದಯವಿಟ್ಟು ಬೆಳಗ್ಗೆ ಒಂದು ಗಂಟೆ ಚರ್ಚೆ ಮಾಡಿ ಆನಂತರ ಉತ್ತರ ಕೊಡಲಿ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಬಿ.ಆರ್.ಪಾಟೀಲ್‌ರವರೆ, ಆ ರೀತಿ ಹೇಳಬೇಡಿ. ಇಲ್ಲಿ seriousness ಇರುವವರೇ ಕುಳಿತಿರುವವರು. Serions ಆಗಿ ಇಲ್ಲ ಎಂದು ಹೇಳಬೇಡಿ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ನಾನು ಸತ್ಯವಾಗಿ ಹೇಳುತ್ತಿದ್ದೇನೆ. ನಾನು ಮುಚ್ಚುಮರೆಯಿಂದ ಹೇಳುತ್ತಿಲ್ಲ. ಸಭೆಯಲ್ಲಿ ಯಾರಿಗೂ seriousness ಇಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಪಾಟೀಲ್‌ರವರೆ, ಮೊನ್ನೆ ಶುಕ್ರವಾರವೇ ಮುಕ್ತಾಯಗೊಳಿಸಬೇಕಾಗಿತ್ತು. ಆದರೆ ಎರಡು ದಿವಸ ಮುಂದೆ ಹಾಕಿಕೊಂಡು ಸಂಪೂರ್ಣ ಎರಡು ದಿನ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ನಾಳೆ ಉತ್ತರ ಹೇಳಲಿ. ಆಮೇಲೆ ಬೇರೆ ಬೇರೆ ಸಣ್ಣ ಪುಟ್ಟ ವಿಚಾರಗಳನ್ನು ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಸದನ ನಡೆದಿದ್ದೇ ರಾಜ್ಯಪಾಲರ ಭಾಷಣದ ಮೇಲೆ ವಂದನಾರ್ಪಣೆಗೆ.

(ಗೊಂದಲ)

ಅಧ್ಯಕ್ಷರು : ಈ ಬಾರಿ ರಾಜ್ಯಪಾಲರ ಭಾಷಣದ ಬಗ್ಗೆ ಅವಕಾಶ ಕೊಟ್ಟಿರುವಷ್ಟು ಹಿಂದೆ ಯಾವಾಗಲೂ ಕೊಟ್ಟಿಲ್ಲ ಎನ್ನುವುದನ್ನು ತಿಳಿದುಕೊಳ್ಳಿ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಸರ್, ಅದಕ್ಕಾಗಿ ತಮಗೆ ಅಭಿನಂದನೆಗಳು. ನಾಳೆ ಇಡೀ ದಿವಸ ಚರ್ಚೆಗೆ ಕೂರೋಣ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಬೇಡ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಕೆಲವು seniors ಆಗಿ ಮಾತನಾಡುವವರು ಇದ್ದೇವೆ.

(ಗೊಂದಲ)

ಅಧ್ಯಕ್ಷರು : ನಾವು ಈಗ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈ ಚರ್ಚೆಯನ್ನು ಈ ದಿವಸ ಪೂರ್ಯೆಸಲೇಬೇಕು.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಸರ್ ಕಾಟಾಚಾರಕ್ಕೆ ಚರ್ಚೆಯನ್ನು ಮಾಡುವುದು ಬೇಡ. ಸ್ವಲ್ಪ ಅರ್ಥಪೂರ್ಣವಾಗಿ ಎಲ್ಲರೂ ಭಾಗವಹಿಸಿ. . .

(ಗೊಂದಲ)

ಅಧ್ಯಕ್ಷರು : ಅದು ಸರಿ. ಭಾಗವಹಿಸಬೇಕಾಗುತ್ತದೆ. ಯಾವ ಪಕ್ಷಕ್ಕೆ ಎಷ್ಟು ಬಾರಿ ಸಿಗುತ್ತದೆಯೋ ಅಷ್ಟು ಬಾರಿ ಸಿಗುತ್ತದೆ. ಅದಕ್ಕೆ ಏನು ಮಾಡುವುದಕ್ಕೆ ಆಗುತ್ತದೆ?

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಈ ರೀತಿ ಆದರೆ ಸರಿಯಲ್ಲ ಸರ್. ತಾವು ಬಹಳ liberal ಆಗಿದ್ದೀರಿ ಎಂದು ನಾವು. . .

(ಗೊಂದಲ)

ಅಧ್ಯಕ್ಷರು:ಚರ್ಚೆ ಬೇಡ. ಈಗ ತಾವು ಮಾತನಾಡುತ್ತೀರೋ ಇಲ್ಲವೋ ಅಷ್ಟು ಹೇಳಿ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಸರ್ ನಾನು ಮಾತನಾಡುವುದಕ್ಕೆ ತಯಾರಿದ್ದೇನೆ. ಸಭೆಯಲ್ಲಿ ಯಾರಿಗೂ seriousness ಇಲ್ಲ. ಬೆಳಗ್ಗೆ 11.00 ಗಂಟೆಗೆ ಬಂದು ಕುಳಿತಿದ್ದಾರೆ. ಈಗ 8.00 ಗಂಟೆಯಾಗಿದೆ.

(ಗೊಂದಲ)

ಅಧ್ಯಕ್ಷರು : ರಾಜ್ಯಪಾರ ಭಾಷಣದ ಮೇಲೆ ಚರ್ಚೆ ಮುಕ್ತಾಯವಾಯಿತು ಎಂದು ಹೇಳಿಬಿಡುತ್ತೇನೆ ಅಷ್ಟೆ. ತಾವು ಮಾತನಾಡಬೇಕೆಂದರೆ ಮಾತನಾಡಿ. .. . .

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಇವತ್ತು ನಾನು ಮಧ್ಯಾಹ್ನ ನಿಮ್ಮ chamberಗೆ ಬಂದು request ಮಾಡಿದಾಗ, ಆಯಿತು, ಬೆಳಗ್ಗೆ ಮಾತನಾಡುವಿರಂತೆ ಎಂದು ತಾವೇ ಹೇಳಿದಿರಿ.

(ಗೊಂದಲ)

ಅಧ್ಯಕ್ಷರು : ಆಗ ತಾವು ಇರಬೇಕಾಗಿತ್ತು. ಅವಕಾಶ ಕೊಡುತ್ತಿದ್ದೆ. ನೀವೇ ಇಲ್ಲದಿದ್ದರೆ ನಾವೇನು ಮಾಡುವುದಕ್ಕೆ ಆಗುತ್ತದೆ?

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ನಾನು ಮಧ್ಯಾಹ್ನ ನಿಮ್ಮ chamber ಗೆ ಬಂದು request ಮಾಡಿದೆ, ನಾಳೆ ಬೆಳಗ್ಗೆ ಮಾತನಾಡುವಿರಂತೆ ಎಂದು ತಾವು ಹೇಳಿದಿರಿ.

(ಗೊಂದಲ)

ಅಧ್ಯಕ್ಷರು : ನಾನು ಹೇಳಿದ್ದು ಬೇರೆ ವಿಚಾರದಲ್ಲಿ, ಈ ವಿಚಾರದಲ್ಲಿ ಅಲ್ಲ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಸರ್ ತಾವು ಹೇಳಿದ ಮೇಲೆಯೇ ನಾವು ನಾಳೆ ಬೆಳಗ್ಗೆ ಮಾತನಾಡೋಣವೆಂದು ಕಾಯುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು : ಆಯಿತು., ಆ ವಿಚಾರ ಬಿಡಿ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ : ಮಾನ್ಯ ಬಿ.ಆರ್.ಪಾಟೀಲ್‌ರವರು ಹಿರಿಯ ಸದಸ್ಯರು. ನಿಮಗೆ ಇದೇ ಅವಕಾಶ ಬೇಕೆಂದು ಏನಿದೆ? ಸಾಕಷ್ಟು ಅವಕಾಶಗಳಿವೆ. ಆ ಸಂದರ್ಭದಲ್ಲಿ ತಾವು ಮಾತನಾಡಬಹುದು.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ವಿಚಾರಗಳನ್ನು ಮಾಡತನಾಡಬಹುದು. ಆದರೆ ಈ ವಿಷಯದಲ್ಲಿ ನಾನು ಮಾತನಾಡಬೇಕಾಗಿದೆ. ಅದು ವಿಶೇಷವಾಗಿ ಮುಖ್ಯ ವಿಷಯಗಳಲ್ಲಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಪಾಟೀಲ್‌ರವರೆ, ತಾವು ಮಾತನಾಡುವುದಕ್ಕೆ ಅವಕಾಶ ಬೇಕಾದಷ್ಟಿದೆ. ಎರಡು ದಿವಸದಿಂದ ನಾವು ಚರ್ಚೆ ಮಾಡುತ್ತಿದ್ದೇವೆ. ಇವತ್ತಂತೂ ಬೆಳಗ್ಗೆಯಿಂದ ಇಷ್ಟೊತ್ತಿನವರೆಗೂ ಚರ್ಚೆಯಾಗಿದೆ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಸರ್, ನಾನು ಬೆಳಗ್ಗೆಯಿಂದ ಮಾತನಾಡಬೇಕೆಂದು ಕಾಯುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಎಲ್ಲಿ ಹೋಗಿದ್ದಿರಿ?

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಆದರೆ ಸದನದಲ್ಲಿಯೇ ಗಾಂಭೀರ್ಯತೆ ಇಲ್ಲ. ದಯಮಾಡಿ ತಾವು ಬೆಳಗ್ಗೆ ಅವಕಾಶ ಮಾಡಿಕೊಟ್ಟರೆ 2–3 ಜನ ಮಾತನಾಡುತ್ತೇವೆ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ : ಸಭೆಯಲ್ಲಿ ಗಾಂಭೀರ್ಯತೆ ಇಲ್ಲ ಎಂದು ತಾವು ಏನು ಹೇಳುತ್ತಿದ್ದೀರಿ ಆ ಮಾತು ಸರಿಯಾದುದಲ್ಲ.

(ಗೊಂದಲ)

ಅಧ್ಯಕ್ಷರು : ಈ ರೀತಿ ಚರ್ಚೆಯಲ್ಲಿಯೇ ಸುಮಾರು 4–5 ನಿಮಿಷ ಹೋಯಿತು.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಬಿ.ಜೆ.ಪಿ. ಕಡೆಯಿಂದ ಒಬ್ಬರು, ಕೆ.ಜೆ.ಪಿ. ಕಡೆಯಿಂದ ಒಬ್ಬರು– ಇಬ್ಬರು ಮಾತನಾಡಿದರೆ ಸರಿ ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು : ಸುಮ್ಮನಿರಿ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವೇ ವಿನಂತಿ ಮಾಡಿಕೊಂಡು ಎರಡು ದಿವಸ ಜಾಸ್ತಿ ತೆಗೆದುಕೊಂಡು ವಿಶೇಷವಾಗಿ ನಾವು ಕುಳಿತುಕೊಂಡಿದ್ದೇವೆ. ಇದನ್ನು ನಾವು ದುರ್ಬಳಕೆ ಮಾಡಿಕೊಳ್ಳಬಾರದು.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ನಾವು ದುರ್ಬಳಕೆ ಮಾಡಿಕೊಳ್ಳುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಆಯಿತು, ಈಗ ಸಾಕು. ಈಗಾಗಲೇ 8.30 ಆಗುತ್ತಿದೆ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮುಕ್ತಾಯವಾಗಿದೆ. ನಾಳೆ ಇದಕ್ಕೆ ಸರ್ಕಾರದಿಂದ ಉತ್ತರವಿದೆ.

ಈಗ ಸಭೆಯು ಮುಕ್ತಾಯಗೊಂಡು ಪುನಃ ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವುದು.

(ಸದನವು ರಾತ್ರಿ 8 ಗಂಟೆ 19 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 12 ನೇ ಜೂನ್ 2013 ರ ಬುಧವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಿಯಿಸಿತು.)

10. ಅನುಬಂಧ–1

ಕರ್ನಾಟಕ ವಿಧಾನ ಸಭೆ

ಹದಿನಾಲ್ಕನೇ ವಿಧಾನ ಸಭೆ

ಮೊದಲನೇ ಅಧಿವೇಶನ

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2013

(2013ನೇ ಸಾಲಿನ ವಿಧಾನ ಸಭೆಯ ವಿಧೇಯಕ ಸಂಖ್ಯೆ 03)

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನೇ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :– (1) ಈ ಅಧಿನಿಯಮವನ್ನು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.